# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು: ಮಹೇಶ್ವರಿ ಭೀಮಶಿ ಭರಮಣ್ಣವರ
EDITOR: MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com
epaper. belagavivarte.com
Regd No : G2/PMG/KA/NK/BM/157/26-28

Volume: 01 | Issue : 67 | TUESDAY 19-05-2026 | PRGI No : KNKAN/26/A0962 | Pages:4 | Rs.2.00 | M: 9742418836


## NEET ಪ್ರತಿಭಟನೆ ಸಂಬಂಧ ಕರೆಯಲಾಗಿದ್ದ ಸಭೆ ರಣಾಂಗಣ: ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾರಾಮಾರಿ



ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಮಾರಾಮಾರಿ

ಬೆಂಗಳೂರು: ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಯುವಘಟಕದ ಕಾರ್ಯಕರ್ತರ ನಡುವೆ ಮಾರಾಮಾರಿ ನಡೆದಿದೆ.

ರಾಷ್ಟ್ರೀಯ ಯುವ ಕಾಂಗ್ರೆಸ್ ನಿನ್ನೆ ಹಲವು ಮಂದಿ ಪದಾಧಿಕಾರಿಗಳನ್ನು ಅವರ ಸ್ಥಾನದಿಂದ ತೆಗೆದುಹಾಕಿತ್ತು. ಇದೇ ವಿಷಯಕ್ಕೆ ಇಂದು ಯುವ ಕಾಂಗ್ರೆಸ್ ಪದಾಧಿಕಾರಿಗಳ ನಡುವೆ ವಾಗ್ವಾದ ನಡೆದಿದ್ದು, ತೀವ್ರ ಸ್ವರೂಪ ಪಡೆದುಕೊಂಡ ಗಲಾಟೆ ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗಿದೆ.

ಓಇಇಖ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆ ಪ್ರತಿಭಟನೆ ಸಂಬಂಧ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಯುವ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷೆ ದೀಪಿಕಾ ರೆಡ್ಡಿ ಮತ್ತು ಅಧ್ಯಕ್ಷ ಮಂಜುನಾಥ್ ಗೌಡ ಬೆಂಬಲಿಗರ ನಡುವೆ ಮಾರಾಮಾರಿ ನಡೆದಿದೆ. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗತೊಡಗಿದೆ.

## ಇಂಧನ ದರ ಏರಿಕೆಗೆ ಜಾಗತಿಕ ಬಿಕ್ಕಟ್ಟೇ ಕಾರಣ: ಕೇಂದ್ರ ಸಚಿವ HD ಕುಮಾರಸ್ವಾಮಿ ಸಮರ್ಥನೆ

ಮೈಸೂರು: ಇಂಧನ ದರ ಏರಿಕೆಗೆ ಜಾಗತಿಕ ಬಿಕ್ಕಟ್ಟೇ ಕಾರಣ, ಅಭಿವೃದ್ಧಿ ಹೊಂದಿದ ಅನೇಕ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಇನ್ನೂ ಇಂಧನ ದರ ಕಡಿಮೆಯೇ ಇದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದ್ದಾರೆ.

ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಭಾನುವಾರ ನಡೆದ 'ಜನರೊಂದಿಗೆ ಜನತಾ ದಳ' ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಐದು ಗ್ಯಾರಂಟಿ ಯೋಜನೆಗಳಿಂದ ಜನರು ಸುಖವಾಗಿ ಬದುಕುತ್ತಿದ್ದಾರೆ ಎಂಬ ಭ್ರಮೆಯಲ್ಲಿ ಕಾಂಗ್ರೆಸ್ ನಾಯಕರು ಇದ್ದಾರೆ. ಅವರು ಪ್ರತಿದಿನ ನನ್ನ ಮನೆಗೆ ಬಂದರೆ ಜನರ ನಿಜವಾದ ಕಷ್ಟ ಏನು ಎನ್ನುವುದು ಗೊತ್ತಾಗುತ್ತದೆ ಎಂದು ಹೇಳಿದರು.

ಇಂಧನ ದರ ಏರಿಕೆ ವಿಚಾರದಲ್ಲಿ ಕೇಂದ್ರ ಸರ್ಕಾರವನ್ನು ಟೀಕಿಸುವ ಮೊದಲು ಕಾಂಗ್ರೆಸ್ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕು, ಇರಾನ್–ಇಸ್ರೇಲ್–ಅಮೆರಿಕಾ ನಡುವಿನ ಜಾಗತಿಕ ಉದ್ವಿಗ್ನತೆಯಿಂದ ತೈಲ ಸರಬ ರಾಜಿನಲ್ಲಿ ವ್ಯತ್ಯಯ ಉಂಟಾಗಿ ವಿಶ್ವದಾದ್ಯಂತ ಇಂಧನ ದರ ಏರಿಕೆಯಾಗಿದೆ. "ಅಭಿವೃದ್ಧಿ ಹೊಂದಿದ ಅನೇಕ ದೇಶಗಳಿಗೆ



ಹೋಲಿಸಿದರೆ ಭಾರತದಲ್ಲಿ ಇನ್ನೂ ಇಂಧನ ದರ ಕಡಿಮೆಯೇ ಇದೆ ಎಂದು ಹೇಳಿದರು.

ಇದೇ ವೇಳೆ ಚಾಮುಂಡೇಶ್ವರಿ ಕ್ಷೇತ್ರ ಜೆಡಿಎಸ್‌ನ ಭದ್ರಕೋಟೆಯಾಗಿಯೇ ಉಳಿಯಲಿದೆ ಎಂದು ಹೇಳಿದ ಅವರು, "ಯಾವ ಒತ್ತಡಕ್ಕೂ ನಾವು ಮಣಿಯುವುದಿಲ್ಲ. ಕಾರ್ಯಕರ್ತರಿಗೆ ಆತ್ಮವಿಶ್ವಾಸ ತುಂಬಲು ಈ ಸಮಾವೇಶ ಆಯೋಜಿಸಲಾಗಿದೆ ಎಂದು ತಿಳಿಸಿದರು

ಹುಣಸೂರು ಶಾಸಕ ಜಿಡಿ.ಹರೀಶ್ ಗೌಡ ಮಾತನಾಡಿ, ಸಮಾವೇಶಕ್ಕೆ ಭಾರೀ ಸಂಖ್ಯೆಯಲ್ಲಿ ಜನರು ಆಗಮಿಸಿರುವುದು ಜೆಡಿಎಸ್‌ಗೆ ಇನ್ನೂ ಬಲವಾದ ಬೆಂಬಲವಿದೆ ಎಂಬುದನ್ನು ತೋರಿಸುತ್ತದೆ ಎಂದರು.

ಕೇವಲ ಐದು ದಿನಗಳಲ್ಲಿ ಕಾರ್ಯಕ್ರಮ ಆಯೋಜಿಸಿದ್ದರೂ ಕ್ಷೇತ್ರದ ಜನರು ಸ್ವಯಂಪ್ರೇರಿತವಾಗಿ ಭಾಗವಹಿಸಿದ್ದಾರೆ ಎಂದು ಹೇಳಿದರು.

ಇದೇ ವೇಳೆ ರಾಜ್ಯದಲ್ಲಿ ಮತ್ತೆ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದ ಹರೀಶ್ ಗೌಡ, "ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿ ಆಗಲಿದ್ದಾರೆ. ನಿಖಿಲ್ ಕುಮಾರಸ್ವಾಮಿ ಕೂಡ ಭವಿಷ್ಯದಲ್ಲಿ ಪ್ರಮುಖ ಸ್ಥಾನಕ್ಕೇರುವರು ಎಂದು ಹೇಳಿದರು.

ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಜೆಡಿಎಸ್ ಈಗ ಹಳೆ ಮೈಸೂರು ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. "ವಿರೋಧಿಗಳು ಜೆಡಿಎಸ್ ಕೇವಲ ಹಳೆ ಮೈಸೂರು ಭಾಗದ ಪಕ್ಷ ಎಂದು ಹೇಳುತ್ತಾರೆ. ಆದರೆ. ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಸೇರಿ ರಾಜ್ಯಾದ್ಯಂತ ಪಕ್ಷ ತನ್ನ ಬಲ ಹೆಚ್ಚಿಸಿಕೊಂಡಿದೆ ಎಂದು ಹೇಳಿದರು.

ಇದೇ ವೇಳೆ 2028ರಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ಸರ್ಕಾರ ರಚಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಮುಖ್ಯಮಂತ್ರಿ ಹುದ್ದೆಗಿಂತ ರಾಜ್ಯದ ಅಭಿವೃದ್ಧಿಯೇ ಮುಖ್ಯ ಎಂದು ಹೇಳಿದರು.

ಕುಮಾರಸ್ವಾಮಿ ಅವರು ಕಡಿಮೆ ಅವಧಿಗೆ ಮುಖ್ಯಮಂತ್ರಿ ಆಗಿದ್ದರೂ ಅವರ ಆಡಳಿತವನ್ನು ಜನರು ಇನ್ನೂ ನೆನಪಿಸಿಕೊಳ್ಳುತ್ತಾರೆ ಎಂದರು.

ಏತನ್ಮಧ್ಯೆ ಚಾಮುಂಡೇಶ್ವರಿ ಕ್ಷೇತ್ರದ ಸ್ಥಳೀಯ ಶಾಸಕ ಜಿ.ಟಿ.ದೇವೇಗೌಡ ಅವರು ಕಾರ್ಯಕ್ರಮಕ್ಕೆ ಗೈರಾಗಿದ್ದರೂ ಜೆಡಿಎಸ್ ತನ್ನ ಶಕ್ತಿ ಪ್ರದರ್ಶನ ನಡೆಸಿತು.

ಸಮಾವೇಶದ ಬ್ಯಾನರ್‌ಗಳು ಮತ್ತು ಫ್ಲೆಕ್ಸ್‌ಗಳಲ್ಲಿ ಜಿಟಿ ದೇವೇಗೌಡರ ಫೋಟೋ ಕಾಣಿಸದಿರುವುದು ಹಲವರ ಹುಬ್ಬೇರುವಂತೆ ಮಾಡಿತು

ಈ ಬಗ್ಗೆ ಮಾತನಾಡಿದ ಕುಮಾರ ಸ್ವಾಮಿ, "ಹಿಂದೆ ಪಕ್ಷದೊಳಗಿನ ಕೆಲವು ತಪ್ಪುಗಳಿಂದ ಜೆಡಿಎಸ್‌ಗೆ ನಷ್ಟವಾಯಿತು. ಆದರೆ, ಈಗ ಆ ತಪ್ಪುಗಳಿಂದ ಪಾಠ ಕಲಿತಿದ್ದೇವೆ" ಎಂದು ಹೇಳಿದರು.

## ಅಂಬೇಡ್ಕರ್ ವಸತಿ ನಿಲಯಕ್ಕೆ ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ, ಭೂಮಿ ಪೂಜೆ ನೆರವೇರಿಸಿದ ಶಾಸಕ ಲಕ್ಷ್ಮಣ ಸವದಿ



ಅಥಣಿ: ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2025–26 ನೇ ಸಾಲಿನ ಅಥಣಿ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಕ್ಕೆ 100 ಲಕ್ಷ ರೂ.ಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ಭೂಮಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಈ ವೇಳೆ ಶಾಸಕ ಲಕ್ಷ್ಮಣ ಸವದಿ ಮಾತನಾಡಿ ಗ್ರಾಮೀಣ ಭಾಗದ ವಿದ್ಯಾ ರ್ಥಿಗಳಿಗೆ ಉತ್ತಮ ವಸತಿ ಸೌಲಭ್ಯ ಕಲ್ಪಿಸು ವುದು ಸರ್ಕಾರದ ಆದ್ಯತೆಯಾಗಿದೆ ಈ ಹೆಚ್ಚುವರಿ ಕೊಠಡಿಗಳ ನಿರ್ಮಾಣದಿಂದ ವಸತಿ ನಿಲಯದಲ್ಲಿ ಮಕ್ಕಳಿಗೆ ಇನ್ನಷ್ಟು ಅನುಕೂಲವಾಗಲಿದೆ ಶಿಕ್ಷಣಕ್ಕೆ ಪೂರಕ ವಾತಾವರಣ ನಿರ್ಮಿಸಲು ಇಲಾಖೆ ಬದ್ಧವಾಗಿದ್ದು ಕೆ.ಆರ್.ಐ.ಡಿ.ಎಲ್ ಅಥಣಿ ವತಿಯಿಂದ ಈ ಕಾಮಗಾರಿ ಕೈಗೆತ್ತಿಕೊ ಳ್ಳಲಾಗಿದೆ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಸತಿ ನಿಲಯದ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಅಧಿಕಾರಿ ಪರಶುರಾಮ ಪತ್ತಾರ, ಚಂದ್ರ ಕಾಂತ ಕಾಂಬಳೆ,ನಿಲಯಪಾಲಕ ರಾಜಶೇ ಖರ ಹಿರೆಮನಿ,ಕೆ ಆರ್ ಡಿ ಎಲ್ ಜೆ ಇ ಸಂತೋಷ ಶೇಗುಣಸಿ, ಗೀರಿರಾಜ ಹೋಮ ಕರ,ಅಡಿವೇಪ್ಪ ಉಲ್ಲಾಗಡ್ಡಿ,ಪುರಸಭೆ ಅಧ್ಯಕ್ಷ ಶಿವಲೀಲಾ ಬುಟಾಳಿ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್, ಸದಸ್ಯರಾದ ರಾಜಶೇಖರ ಗುಡೊಡಗಿ, ದೀಲಿಪ ಲೂನಾರೆ,ಮಲ್ಲು ಬುಟಾಳಿ, ರಾವಸಾಬ ಐಹೊಳೆ,ಮಲ್ಲೇಶ ಹುದ್ದಾರ, ಸಂತೋಷ ಸಾವಡಕರ,ತಿಪ್ಪಣ್ಣ ಭಜಂತ್ರಿ, ರವಿ ಬಡಕಂಬಿ,ಸಯ್ಯದ ಅಮೀನ ಗದ್ಯಾಳ, ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು.

## ರಾಹುಲ್ ಟ್ರೋಫಿ ರಾಷ್ಟ್ರಮಟ್ಟದ ಕ್ರಿಕೆಟ್ ಪಂದ್ಯಾವಳಿ



ಗೋಕಾಕ : ರಾಹುಲ್ ಟ್ರೋಫಿ ಪೈನಲ್ ಪಂದ್ಯದಲ್ಲಿ ಗೆದ್ದ ರಾಯಲ್ ಸಿ.ಸಿ ಸೋಲಾಪೂರ ತಂಡಕ್ಕೆ ಟ್ರೋಫಿ ವಿತರಿಸುತ್ತಿರುವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮತ್ತು ಗಣ್ಯರು

ಗೋಕಾಕ: ಮಹಾರಾಷ್ಟ್ರದ ರಾಯಲ್ ಸಿ.ಸಿ. ಸೋಲಾಪೂರ ಕ್ರಿಕೆಟ್ ತಂಡವು ಶುಕ್ರವಾರದಂದು ರಾಹುಲ್ ಟ್ರೋಫಿ ರಾಷ್ಟ್ರಮಟ್ಟದ ಕ್ರಿಕೆಟ್ ಪಂದ್ಯಾವಳಿಯ ಸಿಜನ್ –2 ಪೈನಲ್ ಪಂದ್ಯವನ್ನು ಗೆದ್ದು ಇತಿಹಾಸ ನಿರ್ಮಿಸಿದೆ.

ಪಾಂಡುರಂಗ ಸಿ.ಸಿ ರಾಯಗಡ್ ಉಸಮಾನ ಪಟೇಲ ನೇತೃತ್ವದ ತಂಡದ ಎದುರು 2 ರನ್ ಅಂತರದ ರೋಮಾಂಚನಕಾರಿ ಗೆಲುವು ಸಾಧಿಸಿದೆ. ಇಲ್ಲಿನ ಮಹರ್ಷಿ ಶ್ರೀ ವಾಲ್ಮೀಕಿ ಕ್ರೀಡಾಂಗಣದಲ್ಲಿ ನಡೆದ 2026ನೇ ಸಾಲಿನ ರಾಹುಲ್ ಟ್ರೋಫಿ ಸಿಜನ್ –2 ಫೈನಲ್ ಪಂದ್ಯದಲ್ಲಿ ರಾಯಗಡ್ ತಂಡವನ್ನು ಬಗ್ಗುಬಡಿಯುವ ಮೂಲಕ ಚೊಚ್ಚಲ ಬಾರಿಗೆ ರಾಹುಲ್ ಟ್ರೋಫಿ ಜಯಿಸಿ ಸಂಭ್ರಮಿಸಿದೆ.

ಗೆಲ್ಲಲು 73 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ರಾಯಗಡ್ ತಂಡಕ್ಕೆ ಸೋಲಾಪೂರ ತಂಡದ ಬಾಲರಗಳಾದ ಸಮೀರ ಬಿರಾದಾರ,ಪ್ರತಮೇಶ, ಅಶೀಶ ದಾಸ ಉತ್ತಮ ಬಾಲಿಂಗ ಪ್ರದರ್ಶನ ಮಾಡಿ ಕಟ್ಟಿ ಹಾಕಿದರು.

ಪಂದ್ಯದ ಕೊನೆಯ ಓವರನ ಕೊನೆಯ ಚಂಡಿನಲ್ಲಿ 3 ರನ್ ಬೇಗಿರುವಾಗ ಬ್ಯಾಟ್ಸಮನ್ ಕೇವಲ ಒಂದು ರನ ಪಡೆಯಲು ಮಾತ್ರ ಸಾಧ್ಯವಾಯಿತು. ಅತ್ಯಂತ ರೋಮಾಂಚನಕಾರಿ ನಡೆದ ಈ ಪಂದ್ಯದಲ್ಲಿ ಸೋಲಾಪೂರ ತಂಡ 2 ರನ್ ನಿಂದ ಪಂದ್ಯವನ್ನು ಗೆದ್ದುಕೊಂಡು ಟ್ರೋಫಿ ತನ್ನದಾಗಿಸಿಕೊಂಡಿತು.

ವಿಜೇತ ತಂಡಕ್ಕೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮತ್ತು ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ರಾಹುಲ್ ಜಾರಕಿಹೊಳಿ ಅವರು ಪ್ರಶಸ್ತಿಗಳನ್ನು ವಿತರಿಸಿ ಶುಭ ಕೋರಿದರು.

ಪೈನಲ್ ಪಂದ್ಯ ಗೆದ್ದ ರಾಯಲ್ ಸಿ.ಸಿ ಸೋಲಾಪೂರ ತಂಡಕ್ಕೆ ಪ್ರಥಮ ಬಹುಮಾನದ ರೂಪದಲ್ಲಿ 3 ಲಕ್ಷ ನಗದು ಮತ್ತು ಆಕರ್ಷಕ ಟ್ರೋಫಿ ಮತ್ತು ಎರಡನೇ ಬಹುಮಾನ ಪಡೆದ ಪಾಂಡುರಂಗ ಸಿ.ಸಿ ರಾಯಗಡ್ ತಂಡಕ್ಕೆ ದ್ವಿತೀಯ ಬಹುಮಾನದ ರೂಪದಲ್ಲಿ 2 ಲಕ್ಷ ರೂ ನಗದು ಮತ್ತು ಆಕರ್ಷಕ ಟ್ರೋಫಿಯನ್ನು ವಿತರಿಸಲಾಯಿತಲ್ಲದೆ ಉತ್ತಮ ಬ್ಯಾಟ್ಸಮನ್, ಉತ್ತಮ ಬಾಲರ್, ಪಂದ್ಯ ಶ್ರೇಷ್ಠ, ಸರಣಿ ಶ್ರೇಷ್ಠ ಸೇರಿದಂತೆ ಅನೇಕ ವೈಯಕ್ತಿಕ ಬಹುಮಾನಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಡಿ.ಸಿ.ಸಿ.ಬ್ಯಾಂಕ್ ನಿರ್ದೇಶಕ ಅಪ್ಪಸಾಬ ಕುಲಗೋಡೆ, ಸಂಘಟಕ ರಿಯಾಜ ಚೌಗಲಾ, ಡಾ.ಘೋಡಗೇರಿ, ಡಾ.ಗಿರೀಶ್ ಸೋನವಾಲಕರ, ಹನೀಫ ಶಾಬಾಶಖಾನ, ಸಂತೋಷ ಭಟ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಾಧನೆ ಯಾರ ಸ್ವತ್ತು ಅಲ್ಲ: ಡಿ.ವಾಯ್.ಎಸ್.ಪಿ ಬಿ.ಎಸ್.ಲೋಕಾಪೂರ



ಮೂಡಲಗಿ: ಕಲ್ಲೋಳಿ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಿದ ವಿವಿಧ ವೇದಿಕೆಗಳ ಕಾರ್ಯಚಟುವಟಿಕೆಗಳ ಸಮಾರೋಪ, ಬಹುಮಾನ ವಿತರಣೆ ಹಾಗೂ ಬಿ.ಎ. ಮತ್ತು ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಬೆಳಗಾವಿಯ ಡಿ.ವೈ.ಎಸ್.ಪಿ. ಬಿ. ಎಸ್. ಲೋಕಾಪುರ ಮಾತನಾಡಿದರು

ಮೂಡಲಗಿ: ಜೀವನದಲ್ಲಿ ಅಸಾಧಾ ರಣ ಸಾಧನೆಗಳನ್ನು ಮಾಡಬೇಕಾದರೆ ಕಠಿಣ ಪರಿಶ್ರಮ ಪಡಬೇಕು ಮತ್ತು ಸದಾ ಗುರು–ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು ಎಂದರು. ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್, ಪುಸ್ತಕ ಗಳು ಹಾಗೂ ವಿವಿಧ ಮಾಧ್ಯಮಗಳು ಲಭ್ಯವಿರುವುದರಿಂದ ಅಧ್ಯಯನ ಮಾಡು ವುದು ಬಹಳ ಸುಲಭವಾಗಿದ್ದು, ಇದನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊ ಳ್ಳಬೇಕು ಎಂದು ಬೆಳಗಾವಿಯ ಡಿ.ವೈ. ಎಸ್.ಪಿ. ಬಿ. ಎಸ್. ಲೋಕಾಪುರ ಕರೆ ನೀಡಿ ದರು. ತಾಲ್ಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಸನ್ 2025–26ನೇ ಸಾಲಿನ ಕ್ರೀಡೆ, ಸಾಂಸ್ಕೃತಿಕ, ಎನ್.ಎಸ್. ಎಸ್. ಹಾಗೂ ವಿವಿಧ ವೇದಿಕೆ ಗಳ ಕಾಯ ರ್ಚಟುವಟಿಕೆಗಳ ಸಮಾ ರೋಪ, ಬಹು ಮಾನ ವಿತರಣೆ ಹಾಗೂ ಬಿ.ಎ. ಮತ್ತು ಬಿ.ಕಾಂ. ಅಂತಿಮ ವರ್ಷದ ವಿದ್ಯಾ ರ್ಥಿಗ ಳ ಬೀಳ್ಕೊಡುಗೆ ಸಮಾರಂ ಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದರು. ಸ್ವಾಮಿ ವಿವೇಕಾನಂದರ "ನಿನ್ನ ಬಾಳಿನ ಶಿಲ್ಪಿ ನೀನೇ" ಎಂಬ ಧ್ಯೇಯವಾಕ್ಯದಂತೆ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿ ಕೊಳ್ಳಬೇಕು. ಗೋಕಾಕ್ ತಾಲೂಕಿನ ಹೆಮ್ಮೆಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರ ಸಾಧ ನೆಯನ್ನು ವಿದ್ಯಾರ್ಥಿಗಳು ಮಾದರಿಯಾ ಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು. ಪ್ರಾಚಾರ್ಯ ಡಾ. ಸುರೇಶ ಭೀ. ಹನಗಂಡಿ ಮಾತನಾಡಿ, ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ ಸನ್ಮಾರ್ಗದಲ್ಲಿ ನಡೆದು ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಬಸಗೌಡ ಶಿವಗೌಡ ಪಾಟೀಲ ಅವರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಅಂತಿಮ ವರ್ಷದ ವಿದ್ಯಾರ್ಥಿಗಳಾದ ಅನುಶ್ರೀ ತೋರಣಗಟ್ಟಿ, ಲಕ್ಷ್ಮಿ ಬಸಗೌಡನ ವರ, ಸರಸ್ವತಿ ಪಾಟೀಲ, ಸೌಖ್ಯ ಸಕ್ರೇಪ್ಪ ಗೋಳ ಹಾಗೂ ಬಸವರಾಜ ಪೂಜೇರಿ ಅವರು ಕಾಲೇಜಿನೊಂದಿಗಿನ ತಮ್ಮ ಶೈಕ್ಷಣಿಕ ಜೀವನದ ಅನಿಸಿಕೆಗಳನ್ನು ಹಂಚಿಕೊಂಡರು. ಇದೇ ಸಂದರ್ಭದಲ್ಲಿ ದಿವಗಂತ ಶ್ರೀ ಬಸಪ್ಪ ಬಾಳಪ್ಪ ಬೆಳಕೂಡ ಅವರ ಸ್ಮರಣಾರ್ಥವಾಗಿ ಸಂಸ್ಥೆಯ ನಿರ್ದೇಶಕ ರಾದ ಬಾಳಪ್ಪ ಬೆಳಕೂಡ ಅವರು ನೀಡಿರುವ ದತ್ತಿ ನಿದಿ ಪುರಸ್ಕಾರ ವನ್ನು 2024–25 ಸಾಲಿನಲ್ಲಿ ಬಿ.ಎ ವಿಭಾಗದಲ್ಲಿ ಅತೀ ಹೆಚ್ಚು ಅಂಕಪಡೆದ ಮಹಾಂತೇಶ ಚಿಗಡೊಳ್ಳಿ, ನಿಸರ್ಗ ಪಾಲಕಿ ಹಾಗೂ ಬಿ.ಕಾಂ. ವಿಭಾಗದಲ್ಲಿ ಪ್ರವೀಣ ಬೀರಗೌಡ್ರ, ಕೀರ್ತಿ ಕಡಾಡಿ ಅವರನ್ನು, ವಿವಿಧ ವಿಷಯಗಳಲ್ಲಿ ನೂರಕ್ಕೆ ನೂರು ಅಂಕ ಪಡೆದ ವಿದ್ಯಾರ್ಥಿಗಳನ್ನು ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಸತ್ಕರಿಸಲಾಯಿತು.

ಸಮಾರಂಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಬಿ.ಎಸ್. ಗೋರೋಶಿ, ಬಿ.ಎಸ್. ಕಡಾಡಿ, ಎಸ್.ಎಂ. ಖಾನಾಪೂರ, ಎಂ.ಡಿ. ಕುರಬೇಟ, ಬಿ.ಕೆ. ಗೋರೋಶಿ, ವಿದ್ಯಾರ್ಥಿ ಪ್ರಧಾನ ಕಾರ್ಯದರ್ಶಿ ಸೌಖ್ಯಾ ಸಕ್ರೆಪ್ಪ ಗೋಳ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ರಾಧಿಕಾ ಕರೆಪ್ಪಗೋಳ ಹಾಗೂ ಪೂಜಾ ಪಂಡ್ರೋಳಿ ಪ್ರಾರ್ಥಿಸಿದರು. ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷ ಡಿ. ಎಸ್. ಹುಗ್ಗಿ ಸ್ವಾಗತಿಸಿದರು. ಎನ್ನೆಸ್ಸೆಸ್ ಕಾರ್ಯಕ್ರಮ ಅಧಿಕಾರಿ ಎಸ್. ಎಂ. ನಿಂಗನೂರ ಪ್ರತಿಭಾ ಪುರಸ್ಕಾರ ನಡೆಸಿಕೊಟ್ಟರು. ಡಾ. ಕೆ.ಎಸ್. ಪರವ್ವಗೋಳ ನಿರೂಪಿಸಿದರು. ಬಿ.ಸಿ. ಮಾಳಿ ವಂದಿಸಿದರು.

# ಕೊಲ್ಲಾಪುರ ಮೂಲದ ಇಬ್ಬರು ಖತರ್ನಾಕ್ ಕಳ್ಳಿಯರು ಪೊಲೀಸ್ ಜಾಲಕ್ಕೆ; 4 ಪ್ರಮುಖ ಪ್ರಕರಣಗಳು ಪತ್ತೆ



ಅಥಣಿ: ತಾಲೂಕಿನ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಜನದಟ್ಟಣೆಯನ್ನು ಬಂಡವಾಳ ಮಾಡಿಕೊಂಡು ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಮಹಾರಾಷ್ಟ್ರ ಮೂಲದ ಅಂತರರಾಜ್ಯ ಮಹಿಳಾ ಕಳ್ಳಿಯರ ಜಾಲವನ್ನು ಭೇದಿಸುವಲ್ಲಿ ಅಥಣಿ ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತರಿಂದ ಸುಮಾರು 6 ಲಕ್ಷದ 80 ಸಾವಿರ ರೂಪಾಯಿ ಮೌಲ್ಯದ 42.5 ಗ್ರಾಂ ಬಂಗಾರದ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ರಾಜಾರಾಮಪುರಿ (ಟಾಕಳಿ ನಾಕಾ, ಮಾಳಿ ಕಾಲೋನಿ) ನಿವಾಸಿಗಳಾದ ಶ್ರೀಮತಿ ಹೇಮಾ ಧರ್ಮೇಂದ್ರ ಕಸಬೇಕರ ಹಾಗೂ ಶ್ರೀಮತಿ ನೀಲಂ ವಿಜಯ ಕಾಂಬಳೆ ಬಂಧಿತ ಆರೋಪಿಗಳಾಗಿದ್ದಾರೆ.

ಇವರನ್ನು ಮಾರ್ಚ್ 24ರಂದು ನಂದಗಾವ ನಿವಾಸಿ ಶ್ರೀಮತಿ ಪುತಳವ್ವಾ ಷಣ್ಮುಕ ಕಾಂಬಳೆ ಅವರು ಅಥಣಿ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ, ಜನದಟ್ಟಣೆಯನ್ನು ಬಳಸಿಕೊಂಡ ಕಳ್ಳಿಯರು ಅವರ ಕೊರಳಿನಲ್ಲಿದ್ದ ಬಂಗಾರದ ಬೋರಮಾಳವನ್ನು ಕಳವು ಮಾಡಿದ್ದರು. ಈ ಕುರಿತು ಅಥಣಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 223/2026 ರನ್ವಯ ಬಿಎನ್‌ಎಸ್ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಈ ಸರಣಿ ಕಳ್ಳತನ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕ (SP) ಶ್ರೀ ಕೆ. ರಾಮರಾಜನ್ ಐಪಿಎಸ್, ಹೆಚ್ಚುವರಿ ಎಸ್‌ಪಿ ಶ್ರೀ ಆರ್. ಬಿ. ಬಸರಗಿ ಹಾಗೂ ಅಥಣಿ ಡಿಎಸ್‌ಪಿ ಶ್ರೀ ಪ್ರಶಾಂತ್ ಮುನ್ನೋಳಿ ಅವರ ಮಾರ್ಗದರ್ಶನದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು. ಅಥಣಿ ವೃತ್ತದ ಸಿಪಿಐ ಶ್ರೀ ಸಂತೋಷ್ ಹಳ್ಳೂರ್ ನೇತೃತ್ವದಲ್ಲಿ, ಪಿಎಸ್‌ಐಗಳಾದ ಶ್ರೀ ಜಿ. ಎಸ್. ಉಪ್ಪಾರ ಮತ್ತು ಶ್ರೀ ಮಲ್ಲಿಕಾರ್ಜುನ ತಳವಾರ ಅವರ ಮುಂದಾಳತ್ವದ ಅಪರಾಧ ತನಿಖಾ ತಂಡವು ಮೇ 16 ರಂದು ಆರೋಪಿಗಳನ್ನು ಹೆಡೆಮುರಿ ಕಟ್ಟಿದೆ.

ಬಂಧಿತರಿಂದ ಪ್ರಸ್ತುತ ಪ್ರಕರಣದ ಆಭರಣ ಮಾತ್ರವಲ್ಲದೆ, ಅಥಣಿ ಠಾಣೆ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿದ್ದ ಅಪರಾಧ ಸಂಖ್ಯೆ 394/2025, 358/2026 ಹಾಗೂ 370/2026 ನೇ ಪ್ರಕರಣಗಳಿಗೆ ಸಂಬಂಧಿಸಿದ 35.5 ಗ್ರಾಂ ಚಿನ್ನಾಭರಣಗಳನ್ನೂ ವಶಪಡಿಸಿಕೊಳ್ಳಲಾಗಿದೆ. ಇದರೊಂದಿಗೆ ಒಟ್ಟು 4 ಕಳ್ಳತನ ಪ್ರಕರಣಗಳು ಇತ್ಯರ್ಥಗೊಂಡಂತಾಗಿದೆ.

ಚಾಣಾಕ್ಷತನದಿಂದ ಕಳ್ಳರನ್ನು ಪತ್ತೆಹಚ್ಚಿದ ತನಿಖಾ ತಂಡದಲ್ಲಿದ್ದ ಪೊಲೀಸ್ ಸಿಬ್ಬಂದಿಗಳಾದ ಎ. ಎ. ಈರಕರ, ಶ್ರೀಮತಿ ಜೆ. ಆರ್. ಅಸೋದೆ, ಮಹಾಂತೇಶ ಪಾಟೀಲ, ಎ. ಬಿ. ಹೊಸಲ್ಕರ, ಎಮ್. ಎಮ್. ಖೋತ, ವಿ. ವಿ. ಗಾಯಕವಾಡ, ಎಸ್. ಎಸ್. ಸನದಿ, ಜೆ. ಹೆಚ್. ಡಾಂಗೆ, ಭೀ. ಎಮ್. ತಳವಾರ, ಕುಮಾರಿ ಜೆ. ಎಸ್. ಬೆಕ್ಕೇರಿ ಹಾಗೂ ಬೆಳಗಾವಿ ತಾಂತ್ರಿಕ ವಿಭಾಗದ ವಿನೋಧ ಠಕ್ಕಣ್ಣವರ ಅವರ ಕಾರ್ಯವೈಖರಿಯನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

# ನೀರಾವರಿಗೆ ನೀಡಿದಷ್ಟೇ ವಿದ್ಯುತ್‌ಗೂ ಪ್ರಾಮುಖ್ಯತೆ: ಐನಾಪುರದಲ್ಲಿ 110 ಕೆವಿ ಸ್ಟೇಶನ್ ನಿರ್ಮಾಣ: ಸಚಿವ ಎಂ.ಬಿ. ಪಾಟೀಲ

ವಿಜಯಪುರ: ನಮ್ಮ ಸರ್ಕಾರ ನೀರಾವರಿಯಷ್ಟೇ ವಿದ್ಯುತ್ತಿಗೂ ಪ್ರಾಮುಖ್ಯತೆ ನೀಡಿದೆ. ಜಲಕ್ರಾಂತಿಯೊಂದಿಗೆ ಇಂಧ'ನ ಕ್ರಾಂತಿಯಲ್ಲಿ ಅಮೂಲಾಗ್ರ ಬದಲಾವಣೆ ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ಹೇಳಿದರು.

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಿಂದ ನಗರದಲ್ಲಿ ನಿರ್ಮಿಸಲಾದ ವಿಜಯಪುರದ ಕಾರ್ಯ ಮತ್ತು ಪಾಲನೆ ವಿಭಾಗೀಯ ಕಚೇರಿಯ ನೂತನ ಕಟ್ಟಡವನ್ನು ಭಾನುವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ನೀರಿಗೆ ಆದ್ಯತೆ ನೀಡಿದ ಮಾದರಿಯಲ್ಲೇ ರೈತರಿಗೆ ವಿದ್ಯುತ್ ಒದಗಿಸಲಾಗುತ್ತಿದೆ. ಟಿಸಿ ದುರಸ್ತಿ ಸಕಾಲದಲ್ಲಿ ಆಗಬೇಕು. ಇಲಾಖೆ ಬಹಳಷ್ಟು ಮಾರ್ಪಾಡಾಗುತ್ತಿವೆ. ಬಹಳಷ್ಟು ಅಚ್ಚುಕಟ್ಟಾಗಿ ಕಟ್ಟಲ್ಪಟ್ಟ ಈ ಕಟ್ಟಡ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕಟ್ಟಡವಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

2014 ರಿಂದ ಹೊಸ ಅಧ್ಯಾಯವನ್ನು ಆರಂಭಿಸಿ, ಮುಂದಾಲೋಚನೆಯಿಂದ ಈ ಭಾಗದ ಬಳಕೆ–ಬೇಡಿಕೆಯನುಸಾರವಾಗಿ ಅಭಿವೃದ್ಧಿಗೆ ಆದ್ಯತೆ ನೀಡಿ, ಹೊಸದಾಗಿ ವಿದ್ಯುತ್ ವಿತರಣಾ ಕೇಂದ್ರ ಹೆಚ್ಚಿಸಲಾಗಿದೆ ಎಂದರು.

ವಿದ್ಯುತ್ ಕ್ಷೇತ್ರದ ಅಭಿವೃದ್ಧಿಯಲ್ಲಿ ಶ್ರಮಿಸಿದ ಕೆಪಿಟಿಸಿಎಲ್ ಅಧೀಕ್ಷಕ ಅಭಿಯಂತರ ಜಿ.ಕೆ.ಗೋಟ್ಯಾಳ ಅವರ ಕಾರ್ಯಕ್ಕೆ ಇದೇ ವೇಳೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಿವಿಲ್ ಆಸ್ಪತ್ರೆಯಲ್ಲಿ ವಿದ್ಯುತ್ ಉಪ ಕೇಂದ್ರವಾಗಬೇಕು. ಜಾಗ ಖರೀದಿಸಿ ಕೇಂದ್ರ ಆರಂಭಿಸಲಾಗುವುದು ಎಂದರು. ವಿಜಯಪುರದ ವಿಮಾನ ನಿಲ್ದಾಣದ ಹತ್ತಿರದ ಐನಾಪುರದಲ್ಲಿ 110 ಕೆವಿ ಸ್ಟೇಶನ್ ನಿರ್ಮಾಣಕ್ಕಾಗಿ ನಮ್ಮ ಸರ್ಕಾರ ಆದ್ಯತೆ ನೀಡಿದೆ. ಐನಾಪುರದಲ್ಲಿ ಈ ವಿದ್ಯುತ್ ಉಪ ಕೇಂದ್ರದಿಂದ ವಿಜಯಪುರ ಏರ್ ಪೊ?ರ್ಟ್, ಮದಭಾವಿ ಹಾಗೂ ಸುತ್ತಲಿನ ಹಳ್ಳಿಗಳಿಗೆ ಅನುಕೂಲವಾಗುತ್ತದೆ ಎಂದರು.




ನಮ್ಮ ಸರ್ಕಾರ ಜಿಲ್ಲೆಯಲ್ಲಿ 210 ಹಾಗೂ 220 ಕೆವಿ ಸ್ಟೇಶನ್ ಗಳನ್ನು ನಿರ್ಮಿಸುತ್ತಿದೆ. ಈ ಪೈಕಿ 8 ಕಾಮಗಾರಿಗಳು ಪ್ರಗತಿಯಲ್ಲಿವೆ. 24 ಕಾಮಗಾರಿಗಳು ಅನುಮೋದನೆಗೊಂಡು ವಿವಿಧ ಹಂತದಲ್ಲಿವೆ ಎಂದರು.

ನಮ್ಮ ಜಿಲ್ಲೆಯಲ್ಲಿ ವಿದ್ಯುತ್ ಉಪ ಕೇಂದ್ರಗಳ ಸಂಖ್ಯೆ ಇಂದು ಗಣನೀಯವಾಗಿ ಹೆಚ್ಚಳವಾಗಿವೆ. 2013ರಲ್ಲಿ 27 ಇದ್ದ ಕೇಂದ್ರಗಳು ಇಂದು 66 ಆಗಿವೆ. ಹೆಚ್ಚು ಕಡಿಮೆ ಡಬಲ್ ಆಗಿವೆ. 110 ಕೆವಿ 24 ಇದ್ದುದ್ದು 60 ಆಗಿವೆ. ಅಂದರೆ ಮೂರು ಪಟ್ಟು ಜಾಸ್ತಿಯಾಗಿವೆ. 220 ಕೆವಿ 3 ಇದ್ದವು. ಈಗ 6 ಆಗಿವೆ. ಇವು ಕೂಡಾ ಡಬಲ್ ಆಗಿವೆ ಎಂದರು.

2016–17ರಲ್ಲಿ 400 ಕೆವಿ ಸ್ಟೇಶನ್ ನಿರ್ಮಾಣಕ್ಕೆ ಅದನ್ನು ಈ ಮೊದಲು ದೇವರಹಿಪ್ಪರಗಿಯಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೆವು. ಆದರೆ ಸರ್ಕಾರಿ ಜಮೀನು ಭೂಸ್ವಾಧೀನ ವೆಚ್ಚ ಬಹಳಷ್ಟಾಗಿದ್ದರಿಂದ ಕಷ್ಟವಾಯಿತು. ಹಾಗಾಗಿ ಸರಕಾರಿ ಜಮೀನು ಹಡಗಲಿಯಲ್ಲಿದ್ದುದನ್ನು ಗಮನಿಸಿ, ಅಲ್ಲಿ ನಿರ್ಮಾಣವಾಗುತ್ತಿದೆ. ಅಧಿಕಾರಿಗಳು ಸಲಹೆ ಮೇರೆಗೆ ಹಡಗಲಿಯಲ್ಲಿ 800 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿದೆ ಎಂದರು.

ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮಾತನಾಡಿ, ನಗರದಲ್ಲಿ ಅಭಿವೃದ್ಧಿ ಬದಲಾವಣೆ ಪರ್ವ ಆರಂಭವಾಗಿದೆ. ನೀರಾವರಿ, ಕೆರೆ ತುಂಬುವ, ವಿದ್ಯುತ್ ಸರಬರಾಜಿನ ಉನ್ನತೀಕರಣ, ಸರ್ಕಾರಿ ಕಟ್ಟಡ, ಸಿಟಿ ಅಂಡರ್ ಗ್ರೌಂಡ್ ಕೇಬಲ್ ಕಾರ್ಯಗಳು ನಡೆದಿವೆ. ಇಂಧನ ಸಚಿವರು ಕೆಲಸ ಮಾಡಿಕೊಡುತ್ತಿದ್ದಾರೆ. ಅಭಿವೃದ್ಧಿ ಬಂದಾಗ ನಾನು ಅಭಿವೃದ್ಧಿಗೆ ಆದ್ಯತೆ ನೀಡುತ್ತೇನೆ. ಕಾಲಕಾಲಕ್ಕೆ ಜನರಿಗೆ ನ್ಯಾಯ ಕೊಡುವ ಕೆಲಸ ಮಾಡಬೇಕು ಎಂದರು.

ವಿದ್ಯುತ್ ಇಲಾಖೆ ನೇರವಾಗಿ ಜನರನ್ನು ಒಳಗೊಂಡ ಇಲಾಖೆ. ಹಾಗಾಗಿ ಇಲಾಖೆ ಅಧಿಕಾರಿಗಳು ಜನರಿಗೆ ವೃಥಾ ತೊಂದರೆ ನೀಡದೇ, ಅವರ ಅರ್ಜಿ ಹಾಗೂ ಕೆಲಸ ಕಾರ್ಯಗಳಿಗೆ ತಕ್ಷಣ ಸ್ಪಂದಿಸಬೇಕು ಎಂದರು.

ವಿಜಯಪುರ ಈಗ ಮೊದಲಿನ ವಿಜಯಪುರವಾಗಿಲ್ಲ. ಸಾಕಷ್ಟು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ವಿಜಯಪುರ ನಗರ ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತಿದೆ ಎಂದರು.

ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ ಅವರು ಮಾತನಾಡಿ, ಜಿಲ್ಲೆಯಲ್ಲಿ ಕುಡಿಯಲಿಕ್ಕೆ ನೀರು ಸಿಗುತ್ತಿರಲಿಲ್ಲ. ಈಗ ಬಿರು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಟ್ಯಾಂಕರ್ ಹಚ್ಚುತ್ತಿಲ್ಲ. ಹತ್ತು ವರ್ಷದಲ್ಲಿ ವಿಜಯಪುರ ಜಿಲ್ಲೆಯಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ. ಸಚಿವ ಎಂ.ಬಿ. ಪಾಟೀಲರ ದೂರದೃಷ್ಟಿಯ ಫಲದಿಂದ ನೀರಾವರಿ ಯೋಜನೆಗಳಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯಾವುದೇ ಸಮಸ್ಯೆ ಬಾರದೆ ಇರುವುದಕ್ಕೆ ಸಚಿವರ ಸತತ ಪ್ರಯತ್ನದ ಫಲವಾಗಿದೆ ಎಂದರು.

ಈ ಜಿಲ್ಲೆಯನ್ನು ಅಭಿವೃದ್ಧಿ ಪಡಿಸಲು ನೀರಾವರಿ, ವಿದ್ಯುತ್ ಸೇರಿದಂತೆ ಅನೇಕ ಜನಪರ ಅಭಿವೃದ್ಧಿ ಕಾರ್ಯಗಳು ನಡೆದಿವೆಣಟಿಜಜಿಟಿಜಜ ಎಂದರು.

110 ಕೆವಿ ವಿದ್ಯುತ್ ಕೇಂದ್ರ ನನ್ನ ಮತಕ್ಷೇತ್ರದಲ್ಲಿ ಉದ್ಘಾಟನೆಗೊಂಡಿದೆ. ಜಿಲ್ಲೆಗೆ ಕೈಗಾರಿಕಾ ವಲಯಗಳನ್ನು ಸಚಿವರು ಜಿಲ್ಲೆಗೆ ತಂದು ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡುವ ಮೂಲಕ ಉದ್ಯೋಗ ಪರ್ವಕ್ಕೆ ಮುನ್ನುಡಿ ಬರೆಯಲಿದ್ದಾರೆ. ಹೀಗಾಗಿ ವಿಜಯಪುರ ಮುಂಬರುವ ದಿನಗಳಲ್ಲಿ ಸಾಕಷ್ಟು ಅಭಿವೃದ್ಧಿ ಹೊಂದಿ ದೇಶ–ವಿದೇಶದ ಜನ ವಿಜಯಪುರಕ್ಕೆ ಬಂದು ನೋಡುವ ಕಾಲ ಸನ್ನಿಹಿತವಾಗಿದೆ ಎಂದರು.

ಹೆಸ್ಕಾಂನ ಅಧೀಕ್ಷಕ ಅಭಿಯಂತರ ಸಿದ್ದಪ್ಪ ಬಿಂಜಗೇರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, 1964 ರಲ್ಲಿ ಆಗಿನ ಮೈಸೂರು ರಾಜ್ಯ ಎಲೆಕ್ಟ್ರಿಸಿಟಿ ಮಂಡಳಿಯಿಂದ ನಿರ್ಮಾಣಗೊಂಡ ಕಟ್ಟಡವು ಸುದೀರ್ಘ 62 ವರ್ಷಗಳ ಬಳಿಕ ಶಿಥಿಲಾವಸ್ಥೆಗೊಂಡಿದ್ದರಿಂದ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಹೊಸದಾಗಿ ನಿರ್ಮಿಸುವ ಯೋಜನೆಯನ್ನು 2021 ರಲ್ಲಿ ಕೈಗೊಳ್ಳಲಾಯಿತು. 2024ರಲ್ಲಿ 6 ಕೋಟಿ 25 ಲಕ್ಷ ನಿರ್ಮಾಣಗೊಂಡು ಲೋಕಾರ್ಪಣೆಗೊಂಡಿದೆ ಎಂದು ಹೇಳಲು ಹರ್ಷವೆನಿಸುತ್ತದೆ. ಕಂಪನಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ತಿಕೋಟದಲ್ಲಿ ಕಟ್ಟಡ, ರೈತರಿಗೆ ಅನುಕೂಲ ಪರಿವರ್ತಕ ರಿಪೇರಿ, ಟ್ರಾನ್ಸಫಾರ್ಮರ್ ಟೆಸ್ಟಿಂಗ್ ಘಟಕ ಈಗಾಗಲೇ ಕಾರ್ಯಾರಂಭ ಮಾಡಿ ರೈತರು ದೂರದ ವಿಜಯಪುರಕ್ಕೆ ಅಲೆದಾಡುವುದನ್ನು ತಪ್ಪಿಸಿದೆ. ಅನೇಕ ವಿನೂತನ ಕಾರ್ಯಕ್ರಮಗಳ ಮೂಲಕ ಗ್ರಾಹಕ ಸ್ನೇಹಿಯಾಗಿ ಕಾರ್ಯ ನಿರ್ವಹಿಸಲಾಗುವುದು ಎಂದರು.

ಈ ಕಾರ್ಯಕ್ರಮದಲ್ಲಿ ಪಾಲಿಕೆ ಮೇಯರ್ ಮಡಿವಾಳಪ್ಪ ಕರಡಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ, ನಗರ ಘಟಕದ ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಶಬ್ಬೀರ ಜಾಗೀರದಾರ, ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ, ಸಿವಿಲ್ ಅಧೀಕ್ಷಕ ಅಭಿಯಂತರ ತಿಪ್ಪಣ್ಣ ಸೇರಿದಂತೆ ಹೆಸ್ಕಾಂ ಮತ್ತು ಕೆಪಿಟಿಸಿಎಲ್ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

# ಅಂಚೆ ಜೀವ ವಿಮೆ ಉತ್ಪನ್ನಗಳ ಮಾರಾಟ

ಬಾಗಲಕೋಟೆ: ಬಾಗಲಕೋಟೆ ಅಂಚೆ ವಿಭಾಗದಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ನಿಯುಕ್ತಿಗಾಗಿ ಆಸಕ್ತ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣಪತ್ರದ ನಕಲುಗಳೊಂದಿಗೆ ಮೇ 18 ರಂದು ಬೆಳಿಗ್ಗೆ 11 ಗಂಟೆಗೆ ಬಾಗಲಕೋಟೆ ಸ್ಟೇಷನ್ ರಸ್ತೆ ಬಳಿಯಿರುವ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನಡೆಯಲಿರುವ ನೇರ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.

ಸಂದರ್ಶನಕ್ಕೆ ಹಾಜರಾಗುವವರು 10ನೇ ತರಗತಿ ಉತ್ತೀರ್ಣರಾಗಿರುವುದು ಕಡ್ಡಾಯವಾಗಿದೆ. ವಯೋಮಿತಿ 18 ರಿಂದ ಗರಿಷ್ಟ ವಯೋಮಿತಿ ಇರುವದಿಲ್ಲ. ನಿರುದ್ಯೋಗಿ ಹಾಗೂ ಸ್ವಯಂ ಉದ್ಯೋಗ ನಿರತ ಯುವಕರು, ವಿಮಾ ಕಂಪನಿಗಳ ಮಾಜಿ ಎಜೆಂಟರು ಹಾಗೂ ಸಲಹೆಗಾರರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳದ ಕಾರ್ಯಕರ್ತೆಯರು, ನಿವೃತ್ತ ಪ್ರಧಾನ ಮತ್ತು ಗ್ರಾಮ ಪಂಚಾಯತಿಯ ಸದಸ್ಯರು ಹಾಗೂ ಅಂಚೆ ವಿಭಾಗದ ಮುಖ್ಯಸ್ಥರಿಗೆ ಸಮಂಜಸವೆಂದು ಕಂಡುಬಂದ ಯಾವುದೇ ಅಭ್ಯರ್ಥಿಗಳಿಗೆ ಆಯ್ಕೆಯಾದ ಪಕ್ಷದಲ್ಲಿ ಅವಕಾಶ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಂಚೆ ಜೀವವಿಮಾ ಅಭಿವೃದ್ಧಿ ಅಧಿಕಾರಿಗಳನ್ನು (8217297792, 7337899266) ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

# ಬೆಳಗಾವಿ: ಮೇಯರ್ ರೂಲಿಂಗ್ ನಿಯಮ ಬಾಹಿರ

ಬೆಳಗಾವಿ: 'ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ' ಎಂಬ ಒಂದೇ ಸಾಲಿನ ಠರಾವು ಅಂಗೀಕರಿಸುವ ಬದಲು, ವಿಷಯವನ್ನು ಸರ್ಕಾರದ ಅಭಿಪ್ರಾಯಕ್ಕೆ ಕಳುಹಿಸಿರುವ ಬೆಳಗಾವಿ ಮಹಾನಗರ ಪಾಲಿಕೆ ಮೇಯರ್ ರೂಲಿಂಗ್ ಈಗ ಕಾನೂನು ವಲಯದಲ್ಲೇ ತೀವ್ರ ಪ್ರಶ್ನೆಗೆ ಗುರಿಯಾಗಿದೆ.

ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ, ಜಲ ತಜ್ಞ ಮೋಹನ ಕಾತರಕಿ ಅವರ ಅಭಿಪ್ರಾಯದ ಪ್ರಕಾರ, ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವೆಂದು ಘೋಷಿಸುವುದನ್ನು ತಡೆಯುವ ಯಾವುದೇ ಕಾನೂನು ಇಲ್ಲ. ಮಹಾರಾಷ್ಟ್ರ ಸರ್ಕಾರ ಬೆಳಗಾವಿ ಸೇರಿದಂತೆ ಗಡಿ ಪ್ರದೇಶಗಳ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿದೆ ಎಂಬ ಕಾರಣ ಮಾತ್ರಕ್ಕೆ, ಪಾಲಿಕೆ ಇಂತಹ ಠರಾವನ್ನು ಸ್ವೀಕರಿಸಬಾರದು ಅಥವಾ ಚರ್ಚೆಗೆ ಅವಕಾಶ ಕೊಡಬಾರದು



ಎನ್ನುವುದು ಕಾನೂನುಬದ್ಧವಾಗಿ ಸಮರ್ಥನೀಯವಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮೋಹನ ಕಾತರಕಿ ಅವರ ಅಭಿಪ್ರಾಯದ ಕೇಂದ್ರ ಅಂಶ ಸ್ಪಷ್ಟವಾಗಿದೆ. ಬೆಳಗಾವಿ ಕರ್ನಾಟಕದ ಭಾಗವಾಗಿರುವುದು ಭಾವನಾತ್ಮಕ ಘೋಷಣೆಯಲ್ಲ. ಅದು ಸಂಸತ್ತು ಅಂಗೀಕರಿಸಿದ ರಾಜ್ಯ ಪುನರ್ವಿಂಗಡನಾ ಕಾಯ್ದೆ 1956ರಡಿ ಸ್ಥಾಪಿತವಾದ ಕಾನೂನು ಸತ್ಯ. ಈ ಕಾನೂನು ಭಾರತ ಸಂವಿಧಾನದ ಲೇಖ 3 ಮತ್ತು 4ರ ಅಧಿಕಾರದ ಆಧಾರದ ಮೇಲೆ ರೂಪುಗೊಂಡಿದ್ದು, ರಾಜ್ಯಗಳ ಗಡಿ ಮರುರಚನೆಯ ಸಂದರ್ಭದಲ್ಲಿ ಬೆಳಗಾವಿ ಕರ್ನಾಟಕಕ್ಕೆ ಸೇರಿದೆ.

ಹೀಗಾಗಿ, ಪಾಲಿಕೆ ಅಂಗೀಕರಿಸಬೇಕಾಗಿದ್ದ ಠರಾವು ಹೊಸ ಗಡಿ ನಿರ್ಣಯವಲ್ಲ. ಅದು ಸಂಸತ್ತಿನಿಂದ ಈಗಾಗಲೇ ನಿರ್ಧರಿಸಲ್ಪಟ್ಟಿರುವ ಕಾನೂನು ಸ್ಥಿತಿಯ ಪುನರುಚ್ಚಾರ ಮಾತ್ರ. ಈ ಕಾರಣದಿಂದ, "ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿಯಿದೆ; ಸರ್ಕಾರದ ಅಭಿಪ್ರಾಯ ಕೇಳಲಾಗುವುದು" ಎಂಬ ಮೇಯರ್ ರೂಲಿಂಗ್‌ಗೆ ಕಾನೂನು ಆಧಾರವೇನು ಎಂಬ ಪ್ರಶ್ನೆ ಈಗ ಗಂಭೀರವಾಗಿದೆ ಎಂದು ಅವರು ಹೇಳಿದ್ದಾರೆ.

ಕನ್ನಡಪರ ಸಂಘಟನೆಗಳ ನಿಲುವು ಕೂಡ ಇದೇ ದಿಕ್ಕಿನಲ್ಲಿ ತೀವ್ರಗೊಂಡಿದೆ. ಬೆಳಗಾವಿ ಕರ್ನಾಟಕದ್ದು ಎಂದು ಹೇಳುವ ಸರಳ ನಿರ್ಣಯಕ್ಕೂ ಪಾಲಿಕೆ ಹಿಂಜರಿದಿರುವುದು ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ ಎಂಬ ಆಕ್ರೋಶ ವ್ಯಕ್ತವಾಗಿದೆ. ಕಾನೂನು ತಡೆ ಇಲ್ಲದಿದ್ದರೂ, ಆಡಳಿತ ರಾಜಕೀಯ ಮುಜುಗರ ತಪ್ಪಿಸಿಕೊಳ್ಳಲು ವಿಷಯವನ್ನು ಸರ್ಕಾರದ ಹೆಗಲಿಗೆ ಹಾಕಿದೆಯೇ ಎಂಬ ಅನುಮಾನವೂ ಬಲಗೊಂಡಿದೆ.

# NEET ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ: ಮೇ 21ಕ್ಕೆ ರಾಜಭವನ ಚಲೋ; ಯುವ ಕಾಂಗ್ರೆಸ್ ಕರೆ, ಡಿಕೆಶಿ–ಸುರ್ಜೇವಾಲಾ ಭಾಗಿ!




ಬೆಂಗಳೂರು: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ನಿಷ್ಪಕ್ಷಪಾತ ತನಿಖೆಗೆ ಆಗ್ರಹಿಸಿ ಹಾಗೂ ಇಡೀ ದೇಶದಲ್ಲಿ ಪರೀಕ್ಷೆ ರದ್ದು ಮಾಡಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ಮೇ 21 ಕ್ಕೆ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಾಗೂ ರಾಜಭವನ ಚಲೋ ನಡೆಸಲಾಗುವುದು ಎಂದು ಭಾರತೀಯ ಯುವ ಕಾಂಗ್ರೆಸ್ ಘೋಷಿಸಿದೆ.

ಭಾನುವಾರ ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಭಾರತೀಯ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿಗವಬ್ ಭಂಡಾರಿಯವರು, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ 89 ಬಾರಿ ಪ್ರಶ್ನೆಪತ್ರಿಕೆ ಸೋರಿಕೆ ನಡೆದಿದ್ದು, ಇದರಿಂದ ವಿದ್ಯಾರ್ಥಿಗಳ ಬದುಕು ಸಂಕಷ್ಟಕ್ಕೆ ಸಿಲುಕಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ವಿದ್ಯಾರ್ಥಿಗಳನ್ನು ಅಗ್ನಿಕುಂಡಕ್ಕೆ ತಳ್ಳಿದೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಹಿನ್ನೆಲೆ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆಗಳು ಬಿಜೆಪಿ ಆಡಳಿತದ ರಾಜ್ಯಗಳಲ್ಲೇ ನಡೆದಿವೆ ಎಂದು ದೂರಿದರು.

ಕರ್ನಾಟಕ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ಮಾತನಾಡಿ, ಈ ಪ್ರತಿಭಟನೆ ದೊಡ್ಡ ಮಟ್ಟದಲ್ಲಿ ನಡೆಯಲಿದ್ದು, ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಂದೀಪ್ ಸಿಂಗ್ ಸುರ್ಜೇವಾಲಾ ಅವರು ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಆಹ್ವಾನ ನೀಡಲಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಕೇಂದ್ರ ಸರ್ಕಾರವನ್ನು ಟೀಕಿಸಿದ ಅವರು, "ಐಪಿಎಲ್ ಬಳಿಕ ಇದೀಗ 'ಇಂಡಿಯನ್ ಪೇಪರ್ ಲೀಕ್' ದೇಶದಲ್ಲಿ ನಡೆಯುತ್ತಿದೆ" ಎಂದು ವ್ಯಂಗ್ಯವಾಡಿದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರನ್ನು ಟೀಕಿಸಿದ ಮಂಜುನಾಥ್ ಗೌಡ, "ಜನಿವಾರ ವಿಚಾರದಲ್ಲಿ ಬೀದಿಗಿಳಿದವರು ಈಗ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರದಲ್ಲಿ ಮೌನವಾಗಿದ್ದಾರೆ" ಎಂದು ಆರೋಪಿಸಿದರು.

ರಾಜಸ್ಥಾನದ ಶಿಕ್ಷಣ ಸಚಿವರ ಆಪ್ತರೇ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಹಿಂದೆ ಇದ್ದಾರೆ ಎಂದೂ ಕೂಡ ಅವರು ಗಂಭೀರ ಆರೋಪ ಮಾಡಿದರು.

ಇದಲ್ಲದೆ, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ಸೇರಿದಂತೆ ಹಲವು ವಿಷಯಗಳಲ್ಲಿ ಮೋದಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ವಾಗ್ದಾಳಿ ನಡೆಸಿದರು.

# ಕಂ ಕ್ರಷ್ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗೆ ಅರ್ಜಿ

ಬಾಗಲಕೋಟೆ: ಬಾಗಲಕೋಟೆ ಜಿಲ್ಲೆಯ 6 ಶಿಶು ಅಭಿವೃದ್ಧಿ ಯೋಜನೆಯ ವ್ಯಾಪ್ತಿಯಲ್ಲಿ 49 ಅಂಗನವಾಡಿ ಕಂ ಕ್ರಷ್ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅದಕ್ಕಾಗಿ 49 ಅಂಗನವಾಡಿ ಕಾರ್ಯಕರ್ತೆ ಹುದ್ದೆಗಳು ಹಾಗೂ 49 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಬಾಗಲಕೋಟೆ ತಾಲೂಕಿನಲ್ಲಿ 8 ಅಂಗನವಾಡಿ ಕಾರ್ಯಕರ್ತೆಯರು, 8 ಸಹಾಯಕಿರು, ಬೀಳಗಿ ತಾಲೂಕಿಗೆ 4 ಕಾರ್ಯಕರ್ತರು, 4 ಸಹಾಯಕಿಯರು, ಹುನಗುಂದ ತಾಲೂಕಿಗೆ 9 ಕಾರ್ಯಕರ್ತೆ, 9 ಸಹಾಯಕಿಯರು, ಬಾದಾಮಿ ತಾಲೂಕಿಗೆ 9 ಕಾರ್ಯಕರ್ತೆ, 9 ಸಹಾಯಕಿಯರು, ಜಮಖಂಡಿ ತಾಲೂಕಿಗೆ 10 ಕಾರ್ಯಕರ್ತೆಯರು, 10 ಸಹಾಯಕಿಯರು ಹಾಗೂ ಮುಧೋಳ ತಾಲೂಕಿಗೆ 9 ಕಾರ್ಯಕರ್ತೆಯರು, 9 ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ.

ಅರ್ಜಿ ಸಲ್ಲಿಸುವವರು 10ನೇ ತರಗತಿ ಪಾಸಾಗಿದ್ದು, 18 ರಿಂದ 35 ವರ್ಷದೊಳಗಿರಬೇಕು. ವಿಧವೆಯರು, ಅಂಗವಿಕಲರಿಗೆ 10 ವರ್ಷ, ರಾಷ್ಟ್ರೀಯ ಶಿಶು ಪಾಲನಾ ಕೇಂದ್ರದಲ್ಲಿ ಈ ಹಿಂದೆ ಸೇವೆ ಸಲ್ಲಿಸಿದ ಕಾರ್ಯಕರ್ತೆ, ಸಹಾಯಕಿಯರ ಸೇವಾ ವರ್ಷದಷ್ಟು ವಿನಾಯಿತಿ ಇರುತ್ತದೆ. ಆಸಕ್ತರು ಅವಶ್ಯಕ ದಾಖಲಾತಿಗಳೊಂದಿಗೆ ಪೂರ್ಣ ವಿವರವನ್ನು ಅಭ್ಯರ್ಥಿಗಳು ಖುದ್ದಾಗಿ ಭರ್ತಿ ಮಾಡಿ ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಶೀಲ್ ಮಾಡಿದ ಪೆಟ್ಟಿಗೆಯಲ್ಲಿ ಖುದ್ದಾಗಿ ಜೂನ್ 12 ರೊಳಗಾಗಿ ಕಚೇರಿ ಅವಧಿಯಲ್ಲಿ ಸಲ್ಲಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಸ್ಪೃಶ್ಯತೆ ಸಕಾಲದಲ್ಲಿ ಕಿತ್ತಿ ಹಾಕದಿದ್ದರೆ ಈ ದೇಶದ ಉದ್ಧಾರ ಸಾಧ್ಯವಿಲ್ಲ



ಕೊಲ್ಹಾರ: ನಾನು ಲಂಡನ್ ದಿಂದ ಬರುವಾಗ ಒಂದು ಹಣ್ಣನ್ನು ತಂದೆ ಮೇಲ್ವರ್ಗದವರು ಆ ಹಣ್ಣಿನ ರಸವನ್ನು ಎಲ್ಲರಿಗೂ ಸಮಾನವಾಗಿ ಹಂಚಿಕೊಡುವುದಾಗಿ ಅತ್ಯಂತ ಶ್ರದ್ಧೆಯಿಂದ ನನ್ನಿಂದ ಪಡೆದು ಅದರ ರಸವನ್ನೆಲ್ಲ ಮೇಲ್ವರ್ಗಕ್ಕೆ ಹಂಚಿ ಅಭಾಗ್ಯರಾದ ನನ್ನ ದಲಿತ ಜನಾಂಗದ ಮೇಲೆ ಸಿಪ್ಪೆಯನ್ನು ಬಿಸಾಕಿ ಬಿಟ್ಟರು ಎಂಬ ಅಂಬೇಡ್ಕರರ ಮಾತಿಗೆ ಮೇಲ್ವರ್ಗಗಳಿಗೆ ಉತ್ತರಿಸಲು ನೈತಿಕತೆ ಇಲ್ಲ ಎಂದು ಖ್ಯಾತ ವಾಗ್ಮಿ ಪ್ರೊ; ಬಸವರಾಜ ಜಾಲವಾದಿ ಹೇಳಿದರು.

ಶುಕ್ರವಾರ ಕೂಡಗಿ ಗ್ರಾಮದಲ್ಲಿ ಎಮ್ ಎಚ್ ಗ್ರೂಪ್ ಆಯೋಜಿಸಿದ ಡಾ.ಬಿ ಆರ್ ಅಂಬೇಡ್ಕರ್ ಅವರ 135 ನೇ ಜಯಂತಿಯಲ್ಲಿ ದಿಕ್ಸೂಚಿ ಭಾಷಣಕಾರರಾಗಿ ಮಾತನಾಡುತ್ತಿದ್ದರು. ಮಹಾತ್ಮ ಗಾಂಧಿಜಿಯೇ ಹೇಳುತ್ತಾರೆ "ಡಾ. ಅಂಬೇಡ್ಕರರಿಗೆ ನನ್ನ ಮುಖದ ಮೇಲೆ ಉಗುಳುವ ಸಂಪೂರ್ಣ ಹಕ್ಕಿದೆ ಏಕೆಂದರೆ ಹಿಂದುಗಳು ಮಾಡಿದ ಪಾಪ ನನ್ನ ತಲೆಯ ಮೇಲಿದೆ ಆದಾಗ್ಯೂ ಸಹ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ನಾನು ಜೀವನಪಯರ್ಂತ ಹೋರಾಡುತ್ತೇನೆ" ಅಸ್ಪೃಶ್ಯತೆ ಈ ದೇಶಕ್ಕಂಟಿದ ಮಹಾನ್ ಕಳಂಕ ಸಕಾಲದಲ್ಲಿ ಕಿತ್ತಿ ಹಾಕದಿದ್ದರೆ ಈ ದೇಶದ ಉದ್ಧಾರ ಸಾಧ್ಯವಿಲ್ಲ ಎಂದಿದ್ದರು.

ಒಬ್ಬ ಶೂರನನ್ನು ಶಸ್ತ್ರದಿಂದ ಕೊಲ್ಲುವುದಕ್ಕಿಂತ ಅವನ ಅಸ್ಮಿತೆಯನ್ನು, ನಿಷ್ಠೆಯನ್ನು ಮತ್ತು ಆತ್ಮವಿಶ್ವಾಸವನ್ನು ಕಸಿದುಕೊಂಡು ಕೊಲ್ಲುವುದು ಬಹುದೊಡ್ಡ ಹಿಂಸೆ ತಮ್ಮ ಹುಟ್ಟಿನ ಕಾರಣದಿಂದಲೇ ಜಾತಿ ಪದ್ಧತಿಯ ಕೀಳರಿಮೆಯ ಆಘಾತ ಉಂಡ ಕರ್ಣ, ಏಕಲವ್ಯ, ಜ್ಯೋತಿಬಾ ಪುಲೆ, ಅಂಬೇಡ್ಕರ್ ಇಡೀ ದ್ರಾವಿಡ ಜನಾಂಗವನ್ನೇ ದಾಸ, ದಸ್ಯು, ನಿಶಾಚರ, ಚಾಂಡಾಲ , ಎಂಬ ಅಸಹ್ಯ ಪದಗಳಿಂದ ಮೂದಲಿಸಿ ಕೀಳರಿಮೆಯ ಕೂಪಕ್ಕೆ ತಳ್ಳಿದ್ದು ಆರ್ಯರು ಮತ್ತು ಪುರೋಹಿತಶಾಹಿಗಳು ಅದಕ್ಕಾಗಿ ಸ್ವಾಮಿ ವಿವೇಕಾನಂದರು ಬನ್ನಿ ಈ ಪುರೋಹಿತಶಾಹಿಯನ್ನು ನಿಯಂತ್ರಿಸದಿದ್ದರೆ ಈ ದೇಶ ದೊಡ್ಡ ಗಂಡಾಂತರ ಎದುರಿಸಲಿದೆ ಎಂದು ಎಚ್ಚರಿಸಿದ್ದರು ಎಂದರು.

ಜಿಲ್ಲಾ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಜಗದೀಶ ಸಾಲಹಳ್ಳಿ ಮಾತನಾಡಿ ಸಂವಿಧಾನ ಒಬ್ಬರಿಗಾಗಿ ಎಲ್ಲಾ ನಮಗೆಲ್ಲರಿಗಾಗಿ ಇದೆ ಮುಂದಿನ ದಿನಮಾನಗಳಲ್ಲಿ ನಾವೆಲ್ಲರೂ ಸೇರಿಯೇ ಅಂಬೇಡ್ಕರ್ ಜಯಂತಿಯನ್ನು ಆಚರಿಸೋಣ ಎಂದರು.

ಜ್ಞಾನಭಾರತಿ ಶಾಲೆಯ ಅಧ್ಯಕ್ಷ ಸೋಮು ಸಾಗರ ಮಾತನಾಡಿದರು ವೇದಿಕೆಯ ಮೇಲೆ ರಾಹುಲ್ ಕುಬಕಡ್ಡಿ ಕೂಡಗಿ ಗ್ರಾಪಂ ಮಾಜಿ ಅಧ್ಯಕ್ಷ ಶಾಂತಪ್ಪ ತೊರವಿ, ಪಿಡಿಒ ಮಲ್ಲಿಕಾರ್ಜುನ ಕುಂಟೋಜಿ, ನಮ್ಮ ಕರವೇ ವಿದ್ಯಾರ್ಥಿ ಘಟಕದ ಜಿಲ್ಲಾಧ್ಯಕ್ಷ ಮಹೇಶಕುಮಾರ ಹರಿಜನ, ಮಾಜಿ ಸೈನಿಕರಾದ ರಾಮು ಚಲವಾದಿ, ಗ್ರಾಮ ಪಂಚಾಯಿತಿ ಸದಸ್ಯರಾದ ಆರಿಫ್ ತಾಳಿಕೋಟಿ, ಜಾವೇದ್ ಗಡೇದ, ಆರಿಫ್ ತಾಳಿಕೋಟಿ,ಬಾಬು ಮೂಪಗಾರ,ದ್ಯಾಮವ್ವ ತೋಳಮಟ್ಟಿ, ಬಾಲಪ್ಪ ಚಲವಾದಿ, ಸಿದ್ದು ದಳವಾಯಿ, ಊರಿನ ಹಿರಿಯರು,ಮುಂತಾದವರು ಹಾಜರಿದ್ದರು.

# ರಷ್ಯಾದಿಂದ ತೈಲ ಖರೀದಿಗೆ ಅಮೆರಿಕ ಒಪ್ಪಿಗೆ ಕೇಳುವ ಮೋದಿ: ದುರ್ಬಲ ರಾಷ್ಟ್ರದ ಸಂಕೇತ: ಸಚಿವ ಎಂ. ಬಿ. ಪಾಟೀಲ



ವಿಜಯಪುರ: ರಷ್ಯಾದಿಂದ ತೈಲ ಖರೀದಿಗೆ ಪ್ರಧಾನಿ ಅಮೆರಿಕ ಒಪ್ಪಿಗೆ ಕೇಳುವುದು ಸರಿಯಲ್ಲ. ಇದು ಭಾರತ ಎಷ್ಟು ದುರ್ಬಲವಾಗಿದೆ ಎಂಬುದರ ಸಂಕೇತವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ನಮ್ಮದು ಸ್ವತಂತ್ರ್ಯ ರಾಷ್ಟ್ರ ಏನು ಮಾಡಬೇಕು. ಎಲ್ಲಿ ಖರೀದಿ ಮಾಡಬೇಕು ಎಂಬುದನ್ನು ಅಮೆರಿಕ ಬಳಿ ಅಡವಿಟ್ಟಿದ್ದರೆ ಇದು ನಮ್ಮ ದುರ್ಭಾಗ್ಯ ಎಂದರು.

ಮನಮೋಹನ್ ಸಿಂಗ್ ಪ್ರಧಾನಿ ಇದ್ದಾಗ ಆರ್ಥಿಕ ಪರಿಸ್ಥಿತಿ ಉತ್ತಮವಾಗಿತ್ತು.

ಪೆಟ್ರೋಲ್, ಡಿಸೇಲ್, ಅಡುಗೆ ಅನಿಲ, ಎಣ್ಣೆ ದರ ಕಡಿಮೆ ಇದ್ದವು. ಮೋದಿ ಅವರ ಅಧಿಕಾರದಲ್ಲಿ ಎಲ್ಲ ದರಗಳು ಏರಿಕೆಯಾಗಿವೆ. ಈಗ ಯುದ್ಧದ ನೆಪವಿದೆ. ಆದರೆ ಯುದ್ಧ ಆರಂಭವಾಗುವ ಮುಂಚೆಯೇ ದರ ಏರಿಕೆಯಾಗಿದೆ ಎಂದರು.

ವಿದೇಶಾಂಗ ನೀತಿ ಮೋದಿ ಅವರ ವೈಯುಕ್ತಿಕ ನೀತಿಯಾಗಿದೆ. ನೆಹರು ಕಾಲದಿಂದ ವಾಜಪೇಯಿ ಅವರ ಕಾಲದವರೆಗೆ ಪ್ಯಾಲಿಸ್ತೇನ್, ಇರಾನ್ ಜೊತೆಗೆ ನಮ್ಮ ಸಾಮ್ಯತೆ ಇತ್ತು.

ಪ್ರಧಾನಿ ಯಾವುದಾದರೂ ದೇಶಕ್ಕೆ ಹೋಗಿ ಏನೇನೋ ಮಾತನಾಡುತ್ತಾರೆ.

ಮೋದಿ ಫಾದರ್ ಲ್ಯಾಂಡ್ ಮದರ್ ಲ್ಯಾಂಡ್ ಎಂದೆಲ್ಲ ಮಾತಾಡಿದರು.

ಭಾರತದ ಬಗ್ಗೆ ಅಮೆರಿಕ ಮಾತನಾಡಿದಾಗ ಇರಾನ್ ಭಾರತದ ಪರ ಗೌರವದ ಮಾತನಾಡಿದೆ. ಇದೆಲ್ಲಾ ಮೋದಿ ಅವರಿಗೆ ಅಂಥ ಭಕ್ತರಿಗೆ ಯಾವಾಗ ಗೊತ್ತಾಗುತ್ತದೆಯೋ ಎಂದು ಕುಟುಕಿದರು.

ಡಾಲರ್ ವಿರುದ್ಧ ರೂಪಾಯಿ ಮೌಲ್ಯ ಕುರಿತು ಇದೇ ಮೋದಿ ಅವರು ಸಿಎಂ ಆಗಿದ್ದಾಗ ಟೀಕೆ ಮಾಡುತ್ತಿದ್ದರು. ನೆಹರು, ಇಂದಿರಾ, ನರಸಿಂಹರಾಯರು ಮನಮೋಹನ್ ಸಿಂಗ್ ಅವರು ಭಾರತಕ್ಕೆ ಉತ್ತಮ ಆರ್ಥಿಕ ವ್ಯವಸ್ಥೆ ಮಾಡಿದ್ದರು.

ಕಚ್ಚಾ ತೈಲದ ದರ ಏರಿದಾಗ ತೈಲ ಬೆಲೆ ಏರಬೇಕು. ಕಡಿಮೆಯಾದಾಗ ದರ ಇಳಿಯಬೇಕು. ಆದರೆ ಬಿಜೆಪಿ ಕಾಲದಲ್ಲಿ ಕಚ್ಚಾ ತೈಲ ಬೆಲೆ ಕಡಿಮೆಯಿದ್ದಾಗ ತೈಲ ಬೆಲೆ ಏರಿಕೆಯಾಗಿದ್ದು ಯಾಕೆ? ಇವರು ಹಿಂದೂ, ಮುಸಲ್ಮಾನ ಎಂದು ಮಾತನಾಡಿ, ಬಾರಾಖೂನ್ ಮಾಫ ಮಾಡಿಕೊಂಡು ಹೊರಟಿದ್ದಾರೆ ಎಂದರು.

ಕಚ್ಚಾತೈಲ ಬೆಲೆ ಕಡಿಮೆಯಿದ್ದಾಗ ಪೆಟ್ರೋಲ್, ಡಿಸೇಲ್ ಬೆಲೆ ಕಡಿಮೆ ಮಾಡಿಲ್ಲ. ಲಕ್ಷಾಂತರ ಕೋಟಿ ಹಣ ಸಂಗ್ರಹ ಮಾಡಿದ್ದಾರೆ. 56 ಲಕ್ಷ ಕೋಟಿ ಹಣ ದರ ಏರಿಕೆಯಿಂದ ಗಳಿಸಿದ್ದಾರೆಂದು ಸುರ್ಜೆವಾಲಾ ಹೇಳಿದ್ದಾರೆ. ಆ ಹಣ ಜನೋಪಯೋಗಿ ಕೆಲಸಕ್ಕೆ ಬಳಕೆ ಮಾಡಿ ದ್ದಾರಾ ಎಂದು ಎಂ.ಬಿ. ಪಾಟೀಲ ಪ್ರಶ್ನಿಸಿದರು.

ಪಾಕಿಸ್ತಾನ, ಬಾಂಗ್ಲಾದೇಶ, ಬರ್ಮಾದಲ್ಲಿ ತೈಲ ಬೆಲೆ ಕಡಿಮೆ ಇದ್ದಾಗ ನಮ್ಮಲ್ಲಿ ದರ ಹೆಚ್ಚಿತ್ತು. ಭಾರತದ ಜಿಡಿಪಿ ದರಕ್ಕಿಂತ ಬಾಂಗ್ಲಾದೇಶದ ಜಿಡಿಪಿ ದರ ಉತ್ತಮವಾಗಿದೆ. ನಾವೆಲ್ಲಾ ಅವರಿಗಿಂತ ಕಡೆಯಾಗಿದ್ದೇವೆ. ಜನರನ್ನು ಮರಳು ಮಾಡುತ್ತಿದ್ದಾರೆ. ಕೊರೋನಾ ಬಂದಾಗ ತಮಟೆ ಬಡೆಯೋದಕ್ಕೆ ಹಚ್ಚಿದ್ದರು. ಮೋದಿ ಅವರು ವಿಶ್ವಗುರು ಎಂದು ಲೇವಡಿ ಮಾಡಿದರು.

ಭ್ರಷ್ಟಾಚಾರದ ಬಗ್ಗೆ ಮೋದಿ ಮಾತನಾಡುತ್ತಾರೆ. ಆದರೆ ಬೇರೆಯದ್ದೇ ಮಾಡುತ್ತಾರೆ. ಪಶ್ಚಿಮ ಬಂಗಾಳ, ಆಸ್ಸಾಂ, ಸಿಎಂ ಬಗ್ಗೆ ಮೋದಿ ಹಿಂದೆ ಏನೆಲ್ಲಾ ಮಾತನಾಡಿದ್ದರು. ಅಶೋಕ ಚವ್ಹಾಣ, ಅಜೀತ್ ಪವಾರ್ ಬಗ್ಗೆ ಮೋದಿ ಏನೆಲ್ಲಾ ಮಾತನಾಡಿದ್ದರು. ಎಲ್ಲವನ್ನು ವಾಷಿಂಗ್ ಮಷಿನ್ ನಲ್ಲಿ ಹಾಕಿ ಶುಭ್ರ ಮಾಡುತ್ತಾರೆಂದು ಎಂ.ಬಿ. ಪಾಟೀಲ ಟಾಂಗ್ ಕೊಟ್ಟಿದ್ದಾರೆ.

# ಭ್ರಷ್ಟಾಚಾರ ಆರೋಪ: ಕಾರ್ಮಿಕ ಇಲಾಖೆ ಕಚೇರಿ ಮೇಲೆ ಲೋಕಾಯುಕ್ತ ಪೊಲೀಸರ ದಾಳಿ

ವಿಜಯಪುರ: ವಿಜಯಪುರ ಜಿಲ್ಲೆಯಲ್ಲಿನ ಕಾರ್ಮಿಕ ಅಧಿಕಾರಿ ಕಛೇರಿಯಲ್ಲಿ ವ್ಯಾಪಕವಾಗಿ ಅವ್ಯವಹಾರ ಮತ್ತು ಭ್ರಷ್ಟಾಚಾರದ ಆರೋಪಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಜಿಲ್ಲೆಯ ಕಾರ್ಮಿಕ ಇಲಾಖೆ ಕಚೇರಿ ಮೇಲೆ ದಾಳಿ ನಡೆಸಿ ಶೋಧನಾ ಕಾರ್ಯ ಕೈಗೊಂಡಿದ್ದಾರೆ.

ಕಾರ್ಮಿಕ ಇಲಾಖೆಯಲ್ಲಿ ಅವ್ಯವಹಾರ ಹಾಗೂ ವ್ಯಾಪಕ ಭ್ರಷ್ಟಾಚಾರ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಕಾರಣ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಕಾರ್ಮಿಕ ಇಲಾಖೆಯನ್ನು ಶೋಧನೆ ಮಾಡಲು ಶೋಧನಾ ವಾರಂಟ್ ಹೊರಡಿಸಿದ್ದು, ಹೀಗಾಗಿ ವಿಜಯಪುರ ಜಿಲ್ಲೆಯ ಕಾರ್ಮಿಕ ಇಲಾಖೆಯ ಕಛೇರಿಯನ್ನು ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಮತ್ತು 3 ಜನ ಪೊಲೀಸ್ ನಿರೀಕ್ಷಕರುಗಳ ತಂಡ ಕಾರ್ಮಿಕ ಇಲಾಖೆ ಕಛೇರಿ ಮೇಲೆ ದಾಳಿ ಮಾಡಿ ಕಳೆದ 2 ದಿನಗಳಿಂದ ಶೋಧನೆ ಕೈಗೊಂಡಿದ್ದಾರೆ.

ಶೋಧನೆಯ ವೇಳೆ ಕಾರ್ಮಿಕರುಗಳಿಗೆ ನೀಡಬೇಕಾದ 44,000 ಸ್ಮಾರ್ಟ್ ಕಾರ್ಡ್ ಗಳನ್ನು ವಿತರಿಸದೆ ಕಛೇರಿಯಲ್ಲಿಟ್ಟುಕೊಂಡಿರುತ್ತಾರೆ. ಕಾರ್ಮಿಕರ 1233 ಅರ್ಜಿಗಳನ್ನು ಬಾಕಿ ಇರಿಸಿಕೊಂಡಿದ್ದು, ಅಲ್ಲದೆ ಸರಕಾರದಿಂದ ಅಸಂಘಟಿತ ಕಾರ್ಮಿಕರಿಗೆ ಅಪಘಾತದಿಂದ ಮೃತಪಟ್ಟ ಅರ್ಜಿಗಳು, ಹೆರಿಗೆ ಸೌಲಭ್ಯದ ಅರ್ಜಿಗಳು, ಬಾಲ ಕಾರ್ಮಿಕರ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದಿರುವ ಕುರಿತು ಅವ್ಯವಹಾರಗಳು ಪತ್ತೆಯಾಗಿರುತ್ತವೆ. ಅಲ್ಲದೆ ಕಾರ್ಮಿಕರಿಗೆ ನೀಡಬೇಕಾಗಿದ್ದ ರೂ.1.10 ಕೋಟಿ ಹಣವನ್ನು ಕಳೆದ ಹಲವು ವರ್ಷಗಳಿಂದ ಇಲಾಖೆಯಲ್ಲಿ ಉಳಿಸಿಕೊಂಡಿರುವುದು ಕಂಡು ಬಂದಿರುತ್ತದೆ.



ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಟಿ.ಮಲ್ಲೇಶ್ ಅವರ ಮಾರ್ಗದರ್ಶನದಲ್ಲಿ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕ ಮಲ್ಲಿಕಾರ್ಜುನ ಎಸ್. ತುಳಸಿಗೇರಿ, ಲೋಕಾಯುಕ್ತ ಪೊಲೀಸ್ ನಿರೀಕ್ಷಕರುಗಳಾದ ಆನಂದ ಟಕ್ಕನ್ನವರ್, ಆನಂದ ದೋಣಿ, ನಿಂಗಪ್ಪ ಪೂಜೇರಿ ಹಾಗೂ ಕಛೇರಿ ಸಿಬ್ಬಂದಿಗಳು ವಿಜಯಪುರ ಕಾರ್ಮಿಕ ಅಧಿಕಾರಿ ಕಛೇರಿಯ ಶೋಧನಾ ಕಾರ್ಯದಲ್ಲಿ ತೊಡಗಿದ್ದು, ಮೇಲ್ಕಂಡ ಯೋಜನೆಗಳಿಗೆ ಸಂಬಂಧಿಸಿದ ಮತ್ತು ಇತರೆ ಸೌಲಭ್ಯಗಳ ಕುರಿತು ದಾಖಲಾತಿಗಳ ಪರಿಶೀಲನೆ ಮತ್ತು ಬಾಕಿ ಇರುವ ಕೆಲಸಗಳ ಬಗ್ಗೆ ಶೋಧನೆ ಕಾರ್ಯ ಇನ್ನೂ ಮುಂದುವರೆದಿದೆ.

# ಅಧಿಕ ಮಾಸೋತ್ಸವ ಉದ್ಘಾಟನೆ



ಧಾರವಾಡ: ಸುಮಾರು ಮೂರು ವರ್ಷಕ್ಕೆ ಒಮ್ಮೆ ಬರುವ ಅಧಿಕ ಮಾಸ, ಮಲ ಮಾಸ, ಪುರುಷೋತ್ತಮ ಟಮಾಸ ಎಂದು ಪ್ರಸಿದ್ಧ ಪಡೆದ ಮಾಸ. ಈ ಮಾಸದಲ್ಲಿ ಎಲ್ಲರೂ ಶಕ್ತಿನುಸಾರ ದಾನ, ಧರ್ಮ ಮೃತಾಚರಣೆ ಭಗವದ್ ಚಿಂತನೆ, ಉಪವಾಸ, ಪರೋಪಕಾರ, ಪಾರಾಯಣ, ಪ್ರದಕ್ಷಿಣೆ, ಜಪ ತಪ, ಭಾಗವತ ಶ್ರವಣಗಳನ್ನು ವಿಶೇಷವಾಗಿ ಅಪೂಪ ದಾನ, ಮುಂತಾದ ಧರ್ಮಚರಣೆಗಳನ್ನು ಅವಶ್ಯವಾಗಿ ಎಲ್ಲರೂ ಮಾಡಬೇಕಾದ ಪುಣ್ಯದಾಯಕ ಮಹಿಮೆಯನ್ನು ನಾರದ ಪುರಾಣ ,ಪದ್ಮ ಪುರಾಣಗಳಲ್ಲಿ ತಿಳಿಸಿಕೊಟ್ಟಿದ್ದಾರೆ ಎಂದು ಪಂ. ಪ್ರಹ್ಲಾದಚಾರ್ಯ ಗಲಗಲಿಯವರು ತಿಳಿಸಿದರು.

ಸತ್ತೂರಿನ ನಾರಾಯಣ ಪಾರಾಯಣ ಬಳಗದ ಆಶ್ರಯದಲ್ಲಿ ರಘೋತ್ತಮ ಅವಧಾನಿಯವರ ನಿವಾಸದಲ್ಲಿ ನಡೆದ ಅಧಿಕ ಮಾಸೋತ್ಸವ 2026 ಉದ್ಘಾಟನೆ ಮಾಡುತ್ತಾ ಈ ಶುಭ ಅಧಿಕ ಮಾಸದಲ್ಲಿ ಸೂರ್ಯನು ಯಾವ ರಾಶಿಯಲ್ಲಿಯೂ ಸಂಕ್ರಮಣ ಮಾಡುವುದಿಲ್ಲ ಎಂಬ ಕಾರಣಕ್ಕೆ ,ಯಾವ ಶುಭ ಕಾರ್ಯಗಳಾದ ಮದುವೆ, ಮುಂಜುವೆ, ಗೃಹಪ್ರವೇಶ, ಮುಂತಾದವುಗಳು ವ್ಯರಜ ಎಂದು ತಿಳಿಸಿದರು, ಈ ಮಾಸದ ನಿಯಾಮಕನಾದ ಭಗವಂತ ಪುರುಷೋತ್ತಮನ ಪ್ರೇರಣೆಯಿಂದ, ಪ್ರೀತ್ಯರ್ಥವಾಗಿ ಒಂದು ತಿಂಗಳು ಉಪವಾಸ ಅಥವಾ ಆಯಾಚಿತ ಭೋಜನ, ನಕ್ತ ಭೋಜನ, ವಿಷ್ಣುಪಂಚಕ ವೃತ ಕೇವಲ ಒಂದು ಬಾರಿ ಊಟ, ಇಂತಹ ಅನೇಕ ಧರ್ಮ ಆಚರಣೆಗಳ ಮಹತ್ವವನ್ನು ಕೇಳಲೇಬೇಕಾದ ಮತ್ತು ತಿಳಿದು ಮಾಡಿದಲ್ಲಿ ನಮಗೆಲ್ಲ ಉತ್ತಮ ಲೋಕ ಪ್ರಾಪ್ತಿಯಾಗುತ್ತದೆ ಎಂದು ಸುಂದರವಾಗಿ ವಿಶ್ಲೇಷಿಸಿದರು.

ಕಾರ್ಯಕ್ರಮದ ಪೂರ್ವದಲ್ಲಿ ಪಾರಾಯಣ ಬಳಗದ ಸದಸ್ಯರಿಂದ ಶ್ರೀ ಹರಿವಾಯು ಗುರುಗಳ ಸ್ತೋತ್ರ ಮತ್ತು ನಾರಾಯಣಿ ಭಜನಾ ಮಂಡಳಿಯಿಂದ 33 ತಾರತಮ್ಯ ಭಜನೆ ಹರಿವಾಣ ಸೇವೆ ನಡೆಯಿತು. ಕಾರ್ಯಕ್ರಮದಲ್ಲಿ ರಘೋತ್ತಮ ಅವಧಾನಿ, ಕೃಷ್ಣ ಹುನಗುಂದ, ಎಲ್. ವಿ. ಜೋಶಿ, ಆನಂದ ದೇಶಪಾಂಡೆ, ಪಾಂಡುರಂಗ ಕುಲಕರ್ಣಿ, ಧೀರೇಂದ್ರ ತಂಗೋಡ, ವಿಶ್ವನಾಥ ಕಾಂಗೋ, ವಿಠ್ಠಲ ಅಂಬೇಕರ, ಪ್ರಶಾಂತ ಕುಲಕರಣಿ , ಶ್ರೀನಿವಾಸ ಪಟ್ಟಣಕೊಡಿ, ಅನಿಲ ಪುರೋಹಿತ, ಪ್ರೊ. ಸಿ. ಕೆ. ಕುಲಕರ್ಣಿ, ವಿಲಾಸ ಸಬ್ನೀಸ, ಮುಂತಾದ ಕುಟುಂಬ ಸದಸ್ಯರು ಉಪಸ್ಥಿತರಿದ್ದರು.

# ಆವಾಂತರ ಸೃಷ್ಟಿಸಿದ ಮಳೆ

ಲಕ್ಷ್ಮೇಶ್ವರ: ತಾಲೂಕಿನಾದ್ಯಂತ ಭಾನುವಾರ ಸಂಜೆ ಬಿರುಗಾಳಿಯೊಂದಿಗೆ ಸುರಿದ ರಭಸದ ಮಳೆ ಅನೇಕ ಆವಾಂತರಗಳನ್ನು ಸೃಷ್ಟಿಸಿದೆ. ಲಕ್ಷ್ಮೇಶ್ವರದ ಕುರಿಗಾಯಿ ಮಂಜುನಾಥ ನಿಂಗಪ್ಪ ಶರಸೂರಿ(26) ಈತನ ಮೇಲೆ ವಿದ್ಯುತ್ ಕಂಬ ಬಿದ್ದು ತೀವ್ರ ಸ್ವರೂಪದಲ್ಲಿ ಗಾಯಗೊಂಡು ಕಿಗೆ ದಾಖಲಿಸಲಾಗಿದೆ. ಹಳ್ಳ, ಚರಂಡಿಗಳ ಅಪಾರ ಪ್ರಮಾಣದ ನೀರು ರಸ್ತೆಗಳ ಮೇಲೆ ಹರಿದು, ಅಲ್ಲಲ್ಲಿ ವಿದ್ಯುತ್ ಕಂಬ, ಮರಗಳು ಬಿದ್ದು ಸಂಚಾರಕ್ಕೆ ಅಡಚಣೆಯಾಗಿದೆ. ಜನ ಹೊರ ಬರಲಾರದ ಸ್ಥಿತಿ ನಿರ್ಮಾಣವಾಗಿದ್ದು ಜನಜೀವನ ಸಂಪೂರ್ಣ ಅಸ್ತವ್ಯಸ್ಥವಾಗಿದೆ.

ಪಟ್ಟಣದ ಕೆಂಚಲಾಪುರ ಓಣಿಯ ಲಂಡಿನಾಲಾ/ಹಳ್ಳದ ಸೇತುವೆ ಮೇಲೆ ಮತ್ತು ಗಡ್ಡದ್ದೇವರಮಠ ರಸ್ತೆಯಲ್ಲಿ ನೀರು ಹರಿದು ಕೆರೆಯಂತಾದ ರಸ್ತೆಗಳಲ್ಲಿ ಕೆಲ ಹೊತ್ತು ಸಂಚಾರ ಸ್ಥಗಿತಗೊಂಡು ಜನರು ಪರದಾಡಿದರು. ಮುಕ್ತಿಮಂದಿರ ರಸ್ತೆ, ಕೆಇಬಿ ಹತ್ತಿರ, ಎಪಿಎಂಸಿ ಹತ್ತಿರ ಮರ ಬಿದ್ದು ಸಂಚಾರಕ್ಕೆ ಅಡ್ಡಿಯಾಗಿತ್ತು. ಪಟ್ಟಣದ ಇಟ್ಟಿಗೆ ಕೆರೆಯಂಚಿನ ಪ್ರದೇಶದ ತಗ್ಗು ಪ್ರದೇಶಗಳಲ್ಲಿನ ಸಾಯಿಬಾಬಾ ದೇವಸ್ಥಾನ, ಕಟ್ಟಿಗೆ ಅಡ್ಡೆ, ಕೆಲ ಮನೆಗಳಿಗೆ ನೀರು ನುಗ್ಗಿದ್ದರಿಂದ ಉಂಟಾಗಿರುವ ಸಮಸ್ಯೆ ಸರಿಪಡಿಸಲು ಪುರಸಭೆಯವರು ಪರದಾಡಿದರು.

ಅಂಬೇಡ್ಕರ ನಗರ, ಮುಕ್ತಿನಗರ ಸೇರಿ ಕೆಲ ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗಿ ಜನತೆ ನೀರು ಹೊರ ಹಾಕುವ ಮೂಲಕ ಆತಂಕಕ್ಕೀಡಾದರು.



ಮೊದಲೇ ತಗ್ಗು ಗುಂಡಿಗಳಿಂದ ಕೂಡಿರುವ ಗ್ರಾಮೀಣ ಪ್ರದೇಶಗಳ ಸಂಪರ್ಕದ ರಸ್ತೆಗಳಲ್ಲಿ ಅಪಾರ ಪ್ರಮಾಣ ನೀರು ನಿಂತು ಜನರು ಊರು ಸೇರಲು ಪರದಾಡಿದರು.

ಗಾಳಿಯೊಂದಿಗೆ ಮಳೆ ಪ್ರಾರಂಭವಾಗುತ್ತಿದ್ದಂತೆಯೇ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಜನಜೀವನ ಅಸ್ತವ್ಯಸ್ಥಗೊಂಡಿತು. ರೈತ ಸಮುದಾಯದವರು, ಕುರಿಗಾರರು ತಮ್ಮ ಜಾನುವಾರು, ಪ್ರಾಣಿಗಳ ರಕ್ಷಣೆ, ಹೊಟ್ಟು–ಮೇವಿನ ಸಂರಕ್ಷಣೆಗೆ ಪರದಾಡಿದರು. ಪೌರ ಕಾರ್ಮಿಕರು ಇಡೀ ಪಟ್ಟಣ ಸುತ್ತಿ ಅಲ್ಲಲ್ಲಿ ಉಂಟಾಗಿದ್ದ ತೊಂದರೆ ಸರಿಪಡಿಸಿದರು.

# ನಿವೃತ್ತ ಯೋಧನ ಅಭಿನಂದನಾ ಕಾರ್ಯಕ್ರಮ

ನವಲಗುಂದ: ಭಾರತೀಯ ಸೈನ್ಯದಲ್ಲಿ ಸುಧೀರ್ಘವಾಗಿ ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ ಮಹಮ್ಮದ ರಫಿಕ ಮಟ್ಟಿಗಾರ ಅವರ ಸೇವೆಯು ಸಾರ್ಥಕತೆಯನ್ನು ಹೊಂದಿದೆ ಎಂದು ನವಲಗುಂದ ಗವಿಮಠದ ಬಸವಲಿಂಗ ಸ್ವಾಮೀಜಿ ನುಡಿದರು.

ಪಟ್ಟಣದ ಶಿಕ್ಷಕರ ಸಹಕಾರಿ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಿದ್ದ ನಿವೃತ್ತ ಯೋಧರಿಗೆ ಅಭಿನಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಈ ದೇಶದಲ್ಲಿ ನಿಜವಾದ ಹೀರೋ ನಮ್ಮ ಸೈನಿಕರು, ನಾವು ಜೀವನದಲ್ಲಿ ಜನ್ಮ ಕೊಟ್ಟ ತಂದೆ–ತಾಯಿ, ಅನ್ನ ಕೊಟ್ಟ ರೈತ, ವಿದ್ಯೆ ಕೊಟ್ಟ ಗುರು ಹಾಗೂ ದೇಶ ಕಾದಂತಹ ಸೈನಿಕರನ್ನು ಮರೆಯಬಾರದು ಎಂದರು.

ಜನಸ್ನೇಹಿ ಪೊಲೀಸ್ ಠಾಣೆಯ ಪಿ.ಎಸ್.ಐ ಜನಾರ್ಧನ ಭಟ್ರಳ್ಳಿ ಮಾತನಾಡಿ ಭಾರತಿಯ ಸೈನ್ಯದಲ್ಲಿ ಸೇವೆ ಸಲ್ಲಿಸಿ ಅವರು ಮಾಡಿರುವಂತಹ ತ್ಯಾಗ ಚಿರಋಣಿ, ಅವರು ಸೇವಾವಧಿಯಲ್ಲಿ ಮಾಡಿರುವಂತಹ ತ್ಯಾಗ ವರ್ಣಿಸಲು ಸಾಧ್ಯವಿಲ್ಲ, ಮೂವತ್ತು ವರ್ಷ ಸೇವೆ ಸಲ್ಲಿಸಿ ಮನೆಗೆ ಮರಳಿ ಬಂದಿದ್ದಾರೆ, ಸೈನಿಕರ ಧೈರ್ಯ, ಶೌರ್ಯಕ್ಕೆ ಸಾಟಿ ಯಾವುದು ಇಲ್ಲಾ ಎಂದರು.

ಶರಣ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಎ.ಬಿ ಕೊಪ್ಪದ ಮಾತನಾಡಿ ದೇಶದ ಗಡಿಯೊಳಗೆ ಚಳಿ ಮಳೆಯನ್ನು ಲೆಕ್ಕಿಸದೆ ದೇಶದ ಸೇವೆ ಸಲ್ಲಿಸಿ ಬಂದಿದ್ದು ಖುಷಿ ತಂದಿದೆ, ನಾವು ನೆಮ್ಮದಿಯಿಂದ ಇರಲು ಮೂಲ ಕಾರಣ ನಮ್ಮ ಸೈನಿಕರು, ಅವರು ತಮ್ಮ ಜೀವವನ್ನು ಲೆಕ್ಕಿಸದೆ ಹೊರಾಟ ಮಾಡಿ ಸೇವೆ ಸಲ್ಲಿಸಿ ಮಾತೃ ಭೂಮಿಗೆ ಬರುವುದು ಎಂದರೆ ಅದು ಮರು ಜನ್ಮ ಪಡೆದಂತೆ, ಅವರು ತಮ್ಮ ಕುಟುಂಬವನ್ನು ಬಿಟ್ಟು ಹೋಗುವುದು ಸಾಮಾನ್ಯವಾದ ಕೆಲಸವಲ್ಲ ಅಂತಹ ಸೈನಿಕರ ತ್ಯಾಗವನ್ನು ನಾವು ಸ್ಮರಿಸಬೇಕು ಎಂದರು.

ಈ ಮೊದಲು ನಿವೃತ್ತ ಯೋಧ ಮಹಮ್ಮದರಫಿಕ್ ಇಮಾಮಸಾಬ ಮಟ್ಟಿಗಾರ ಅವರು ತಮ್ಮ ಕುಟುಂಬಸ್ಥರೊಂದಿಗೆ ಪಟ್ಟಣದ ರೈತಭವನದ ಪಕ್ಕದಲ್ಲಿನ ವೀರಗಲ್ಲಿಗೆ ಮಾಲಾರ್ಪಣೆ ಮಾಡಿ, ರೈತ ಭವನದಲ್ಲಿ ಸನ್ಮಾನ ಸ್ವೀಕರಿಸಿ ನಂತರ , ತ್ಯಾಗವೀರ ಲಿಂಗರಾಜ ದೇಸಾಯಿಯವರ ಮೂರ್ತಿಗೆ ಮಾಲಾರ್ಪಣೆ, ಅಲ್ಲಿಂದ ಪೊಲೀಸ್ ಠಾಣೆಯಲ್ಲಿರುವ ಹುತಾತ್ಮ ಪೊಲೀಸರ ವೀರಗಲ್ಲಿಗೆ ಗೌರವ ಸಮರ್ಪಣೆ ಸಲ್ಲಿಸಿದ ನಂತರ ಶಿಕ್ಷಕರ ಸಹಕಾರಿ ಕಲ್ಯಾಣ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



ಈ ಸಂದರ್ಭದಲ್ಲಿ ಮುಸ್ಲಿಂ ಧರ್ಮ ಗುರುಗಳಾದ ಸೈಯ್ಯದ ಅಮಾನುಲ್ಲಾ ಖಾಜಿ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ನಾಗನಗೌಡ್ರ ಪಾಟೀಲ್, ರಾಮಚಂದ್ರ ತಹಶೀಲ್ದಾರ, ರಾಯನಗೌಡ ಪಾಟೀಲ, ರಿಯಾಜಅಹ್ಮದ ಪಿರಜಾದೆ, ಸುಭಾಷಚಂದ್ರಗೌಡ್ರ ಪಾಟೀಲ್, ಎಮ್.ಜೆ ನದಾಫ, ಎನ್. ಕೆ ಕರ್ಜಗಿ, ಬಸನಗೌಡ ಪಾಟೀಲ್, ಮಂಜುನಾಥ ಸುಬೇದಾರ, ರವಿ ತೋಟದ, ಮಾಬುಸಾಬ ಯರಗುಪ್ಪಿ, ಬಶೀರಅಹ್ಮದ ಹುನಗುಂದ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಅರ್ಜಿ ಆಹ್ವಾನ

ಗದಗ: ದ್ವಿದಳಧಾನ್ಯಗಳಲ್ಲಿ ಮೌಲ್ಯವರ್ಧನೆ ಉತ್ತೇಜಿಸಲು ಹಾಗೂ ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ, ಗದಗ ಜಿಲ್ಲೆಯ ಅರ್ಹ ಫಲಾನುಭವಿಗಳಿಂದ ದ್ವಿದಳಧಾನ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂನ್ 15 ಕೊನೆಯ ದಿನವಾಗಿದೆ.

ಆಸಕ್ತ ರೈತರು, ರೈತ ಉತ್ಪಾದಕ ಸಂಸ್ಥೆಗಳು, ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು, ನೋಂದಾಯಿತ ಸಂಸ್ಥೆಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಕೇಂದ್ರ ಮತ್ತು ರಾಜ್ಯದ ಪಾಲಿನ ಶೇ. 60:40 ಅನುಪಾತದಲ್ಲಿ, ಯೋಜನಾ ವೆಚ್ಚದ ಶೇ. 33 (ಗರಿಷ್ಠ ರೂ. 25 ಲಕ್ಷ) ರಷ್ಟು ಸಹಾಯಧನ ನೀಡಲು ಅವಕಾವಿರುತ್ತದೆ. ಸದರಿ ಯೋಜನೆಯಡಿ ಬ್ಯಾಂಕ್ ಸಾಲ ಪಡೆಯುವದು ಕಡ್ಡಾಯವಾಗಿದ್ದು, ಯೋಜನಾ ವೆಚ್ಚದ ಶೇ. 15 ರಷ್ಟು ಸ್ವಂತ ಬಂಡವಾಳ ಹೂಡುವ ಸಾಮರ್ಥ್ಯವಿರಬೇಕು. ಆಸಕ್ತ ಫಲಾನುಭವಿಗಳು ಜೂನ್ 15 ರೊಳಗಾಗಿ ಸಂಬಂಧಿಸಿದ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೈಸೂರಿನಲ್ಲಿ ಒಂದು ದಿನದ ಲಗೋರಿ ಕಾರ್ಯಾಗಾರ




ವಿಜಯಪುರ: ಮೈಸೂರಿನ ಕೆ ಆರ್ ಎಸ್ ರಸ್ತೆ,ಪಂಪ್ ಹೌಸ್ ನಲ್ಲಿರುವ ಪರಂಪರೆ ಪರಿಸರ ಪಾಠಶಾಲಾ ಆವರಣದಲ್ಲಿ ಒಂದು ದಿನದ ಲಗೋರಿ ತರಬೇತಿ ಕಾರ್ಯಾಗಾರ ನಡೆಯಿತು.

ಪರಂಪರೆ ಪರಿಸರ ವತಿಯಿಂದ ಆಯೋಜಿಸಿದ ಕಾರ್ಯಗಾರ ಬೆಳಿಗ್ಗೆ 8 ಗಂಟೆಗೆ ಪ್ರಾರಂಭಿವಾಯಿತು.

ಈ ತರಬೇತಿಯಲ್ಲಿ ಬಾಲಕ, ಬಾಲಕಿಯರು, ಪುರುಷರು, ಮಹಿಳೆಯರು, ವೃದ್ಧರು ಮತ್ತು ವಿವಿಧ ಇಲಾಖೆಯ ನಿವೃತ ಅಧಿಕಾರಿಗಳು ಭಾಗವಹಿಸಿದ್ದರು.

ಆಯೋಜಕರಾದ ಸುಪ್ರೀತ್ ಎಂ.ಎಸ್. ಅವರ ನೇತೃತ್ವದಲ್ಲಿ 12 ತಂಡಗಳು ಭೂಮಿ, ವಾಯು, ಜಲ, ಅಗ್ನಿ, ಆಕಾಶ,ನಕ್ಷತ್ರ, ಸೂರ್ಯ, ಚಂದ್ರ ನವಗ್ರಹ, ನಿಷ್ಕಲಾ, ದೇಸಿ, ಎಂ ಫೈ ಎಂಬ ತಂಡಗಳು ಭಾಗವಸಿದ್ದವು. ಸಾಯಂಕ 6 ಗಂಟೆಗೆ ಪಡೆದ ಸಮಾರೋಪ ಸಮಾರಂಭದಲ್ಲಿ ಪ್ರಥಮ ಸ್ಥಾನ –ಜಲ ತಂಡ, ದ್ವಿತೀಯ ಸ್ಥಾನ – ಭೂಮಿ ತಂಡ,

ತೃತೀಯ ಸ್ಥಾನ  ಆಕಾಶ ತಂಡಗಳು ಜಯಗಳಿಸಿದರು. ಗೆದ್ದ ತಂಡಗಳಿಗೆ ಪ್ರಮಾಣ ಪತ್ರ ನೀಡಲಾಯಿತು.

ಈ ಸಂದರ್ಭದಲ್ಲಿ ಲಗೋರಿ ತರಬೇತಿಯನ್ನು ರಾಷ್ಟ್ರಿಯ ತರಬೇತಿದಾರ ಹಾಗೂ ನಿರ್ಣಾಯಕ ಬಸವರಾಜ ಬಾಗೇವಾಡಿ ಉತ್ನಾಳ ಅವರು ನೀಡಿದರು. ಈ ಸಂದರ್ಭದಲ್ಲಿ ರೂತು ಜಾಕ್ಲಿನ್, ಮಹೇಶ್ ಸಾಕ್ರೆ, ಶಿವಕುಮಾರಸ್ವಾಮಿ, ಆಯುಷ್ಮಾನ್ ಡಿ ಪಿ ಮತ್ತು ಮಕ್ಕಳು ಪೊಷಕರು ಹಾಗೂ ಶಿಬಿರಾರ್ಥಿಗಳು ಭಾಗವಹಿಸಿದ್ದರು.

# ದ್ವಿದಳ ದಾನ್ಯ ಸಂಸ್ಕರಣೆ, ಪ್ಯಾಕೇಜಿಂಗ್ ಘಟಕ ಸ್ಥಾಪನೆಗೆ ಅರ್ಜಿ

ಬಾಗಲಕೋಟೆ: ಬಾಗಲಕೋಟೆ ಜಿಲ್ಲೆಯಲ್ಲಿ 2026–27ನೇ ಸಾಲಿನ ದ್ವಿದಳ ದಾನ್ಯಗಳಲ್ಲಿ ಆತ್ಮನಿರ್ಭರತಾ ಅಭಿಯಾನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕೊಯ್ಲೋತ್ತರ ಮೂಲಭೂತ ಸೌಕಯಾರ್ಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರಾದ ಟಿ.ಎಸ್.ರುದ್ರೇಶಪ್ಪ ತಿಳಿಸಿದ್ದಾರೆ.

ಯೋಜನೆಯಡಿ ದ್ವಿದಳ ಧಾನ್ಯಗಳ ಸಂಸ್ಕರಣೆ ಹಾಗೂ ಪ್ಯಾಕೇಜಿಂಗ್ ಘಟಕಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದ್ದು, ರೈತರ ಆದಾಯ ಹೆಚ್ಚಿಸುವುದು ಹಾಗೂ ದ್ವಿದಳ ಧಾನ್ಯಗಳಲ್ಲಿ ಮೌಲ್ಯವರ್ಧನೆ ಉತ್ತೇಜಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 60:40 ಅನುಪಾತದ ಸಹಾಯಧನದಡಿ ಯೋಜನಾ ವೆಚ್ಚದ ಶೇ.33 ರಷ್ಟು ಸಹಾಯಧನವನ್ನು (ಗರಿಷ್ಟ ರೂ. 25.00 ಲಕ್ಷಗಳ ಮಿತಿಯೊಂದಿಗೆ) ನೀಡಲಾಗುವುದು. ಘಟಕ ನಿರ್ಮಾಣದ ಭಾಗವಾಗಿ ಕಟ್ಟಡ, ಗೋದಾಮು ಹಾಗೂ ಸಂಗ್ರಹಣಾ ವ್ಯವಸ್ಥೆಗಳ ನಿರ್ಮಾಣಕ್ಕೆ ಅರ್ಹ ಸಹಾಯಧನದ ಮೊತ್ತದ ಗರಿಷ್ಟ ಶೇ.30 ರಷ್ಟು ಹಣವನ್ನು ಬಳಸಿಕೊಳ್ಳಲು ಅವಕಾಶವಿದೆ.

ಸ್ಥಾಪಿಸಲ್ಪಡುವ ದ್ವಿದಳ ಧಾನ್ಯ ಸಂಸ್ಕರಣಾ ಘಟಕಗಳು ಪ್ರತಿ ಗಂಟೆಗೆ ಕನಿಷ್ಟ 300 ಕೆ.ಜಿ. ಸಾಮರ್ಥ್ಯ ಹೊಂದಿರಬೇಕು. ಬಳಕೆಯಾಗುವ ಎಲ್ಲಾ ಯಂತ್ರೋಪಕರಣಗಳು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಃಖಿಖ) ಅಥವಾ ಸಮಾನ ಗುಣಮಟ್ಟದ ಮಾನದಂಡಗಳಿಗೆ ಅನುಗುಣ ವಾಗಿರಬೇಕು. ಫಲಾನುಭವಿಗಳು ಘಟಕವನ್ನು ಸ್ಥಾಪಿಸಿದ ದಿನಾಂಕದಿಂದ ಕನಿಷ್ಟ ಮೂರು ವರ್ಗಗಳವರೆಗೆ ನಿರ್ವಹಣೆ ಮಾಡುವುದು ಕಡ್ಡಾಯವಾಗಿದೆ. ಯೋಜನಾ ಅನುದಾನದ ದುರುಪಯೋಗ ಕಂಡುಬಂದಲ್ಲಿ ಸರ್ಕಾರದ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ದಂಡ ಹಾಗೂ ವಸೂಲಿ ಕ್ರಮ ಕೈಗೊಳ್ಳಲಾಗುವುದು.

ಈ ಯೋಜನೆಯ ಸೌಲಭ್ಯವನ್ನು ರೈತ ಉತ್ಪಾದಕ ಸಂಸ್ಥೆಗಳು, ಕ್ಲಸ್ಟರ್ ಮಟ್ಟದ ಒಕ್ಕೂಟಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ನೋಂದಾಯಿತ ಸಂಸ್ಥೆಗಳು ಹಾಗೂ ವೈಯಕ್ತಿಕ ಫಲಾನುಭವಿ (ಯೋಜನೆ ವೆಚ್ಚದ ಶೇ. 15 ರಷ್ಟು ಸ್ವಂತ ಬಂಡವಾಳ ಹೂಡಿಕೆ ಮಾಡುವ ಸಾಮಥ್ಯ ಹೊಂದಿರುವುದು) ಗಳು ಪಡೆಯಲು ಅರ್ಹರಾಗಿರುತ್ತಾರೆ. ಆಸಕ್ತರು ತಮ್ಮ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಜೂನ್ 6 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ಶೈಕ್ಷಣಿಕ ಬದುಕಿನಲ್ಲಿ ಸಾಧನೆಯೇ ಮೈಲುಗಲ್ಲು




ತಾಳಿಕೋಟೆ: ಪಾಲಕರ ಪ್ರೋತ್ಸಾಹ ಶಿಕ್ಷಕರ ಶಿಕ್ಷಣ ನಿಮ್ಮ ಪ್ರಯತ್ನ ಸದೃಡವಾಗಿದ್ದರೆ ಸಾಧನೆಯ ಸಾಧಕರಾಗಿ ಹೊರಹೊಮ್ಮಲು ಸಾದ್ಯವಾಗಲಿದೆ ಅಂತಹ ಸಾಧನೆಗೈದ ಬ್ರಿಲಿಯಂಟ್ ಶಾಲೆಯ ವಿದ್ಯಾರ್ಥಿನಿ ರಾಜ್ಯಮಟ್ಟದಲ್ಲಿ ಗುರುತಿಸಿಕೊಳ್ಳುವ ಕೆಲಸ ಮಾಡಿರುವದು ಸಂತಸ ತಂದಿದೆ ಎಂದು ಶ್ರೀ ಮಾರುತಿ ಶಿಕ್ಷಣ ಸಂಸ್ಥೆಯ(ಬ್ರಿಲಿಯಂಟ್) ಅಧ್ಯಕ್ಷ ನಾನಾಗೌಡ ನಡುವಿನಮನಿ ಅವರು ಹೇಳಿದರು.

ಎಸ್‌ಎಸ್‌ಎಲ್‌ಸಿ ಪರಿಕ್ಷೆಯಲ್ಲಿ ಸಾಧನೆಯ ತವಕಿನಲ್ಲಿದ್ದ ತಾಳಿಕೋಟೆ ಮೈಲೇಶ್ವರ ಕ್ರಾಸ್‌ನ ಬ್ರಿಲಿಯಂಟ್ ಶಾಲೆಯ ಆಂಗ್ಲ ಮಾಧ್ಯಮ ವಿದ್ಯಾರ್ಥಿನಿ ಕುಮಾರಿ ಗಂಗಾ ಅಶೋಕ ಕೊಳೂರ ಮರು ಮೌಲ್ಯಮಾಪನದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದರ ಕುರಿತು ಬ್ರಿಲಿಯಂಟ್ ಶಾಲಾ ಆವರಣದಲ್ಲಿ ಆಯೋಜಿಸಲಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು ಉತ್ತಮ ಶಿಕ್ಷಣಕ್ಕೆ ಹೆಸರುವಾಸಿಯಾಗಿರುವ ಬ್ರಿಲಿಯಂಟ್ ಶಿಕ್ಷಣ ಸಂಸ್ಥೆ ಯಾವಾಗಲು ತನ್ನ ಘನತೆಯನ್ನು ಕಾಪಾಡಿಕೊಂಡು ಬಂದಿದೆ ವಿದ್ಯಾರ್ಥಿಗಳ ಶೈಕ್ಷಣಿಕ ಬಧುಕಿನಲ್ಲಿ ಈ ಸಾಧನೆ ಇನ್ನಷ್ಟು ಹೆಚ್ಚಿನ ಭಲ ಕೊಡಲಿದೆ ರಾಜ್ಯಮಟ್ಟದಲ್ಲಿ ಪ್ರಥಮ ಯಾರ್ಂಕ್ ಪಡೆದು ಸಾಧನೆಗೈದ ವಿದ್ಯಾರ್ಥಿನಿ ಗಂಗಾ ಕೊಳೂರ ಹಾದಿಯಲ್ಲಿ ಎಲ್ಲ ವಿದ್ಯಾರ್ಥಿಗಳು ಸಾಗಿ ಉಜ್ವಲ ಭವಿಷ್ಯ ಕಂಡುಕೊಳ್ಳಬೇಕೆಂದರು.

ಬ್ರಿಲಿಯಂಟ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ ಬಿ ಮಡಿವಾಳರ ಅವರು ಮಾತನಾಡಿ ಭಾರತ ವಿಶ್ವಕ್ಕೆ ಯಾವುದೇ ವಿಷಯವನ್ನು ಪರಿಚಯ ಮಾಡಿಕೊಡುವಂತಹ ಯಾವಾಗಲು ಮಾಡುತ್ತಾ ಬಂದಿದೆ ಸಾಧನೆ ಎಂಬುದು ನಮ್ಮ ದೇಶಕ್ಕೆ ಹೊಸದಲ್ಲಾ ಅಂತಹ ಭಾರತ ದೇಶದ ಪುಣ್ಯಭೂಮಿಯಲ್ಲಿ ಜನಿಸಿದ ನಾವು ನಿವುಗಳು ಸಾಧನೆ ಇಲ್ಲದೇ ಬಧುಕಿದರೆ ಇಡೀ ಜೀವನವೇ ವ್ಯರ್ಥವಾಗಲಿದೆ ಶೈಕ್ಷಣಿಕ ಹಂತದಲ್ಲಿ ಬ್ರಿಲಿಯಂಟ್ ಶಾಲೆಯ ಆಂಗ್ಲ ಮಾಧ್ಯಮ ವಿದ್ಯಾರ್ಥಿನಿ ಗಂಗಾ ಕೊಳೂರ ತಾನು ಬರೆದ ಪರಿಕ್ಷೆಯ ಮೇಲೆ ವಿಸ್ವಾಸವಿಟ್ಟು ಮರು ಮೌಲ್ಯಮಾಪನದಲ್ಲಿ ಬಿಟ್ಟು ಹೋಗಿದ್ದ 2 ಅಂಕಗಳನ್ನು ಪಡೆದುಕೊಳ್ಳುವದರೊಂದಿಗೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಬ್ರಿಲಿಯಂಟ್ ಶಿಕ್ಷಣ ಸಂಸ್ಥೆಯ ಹೆಸರನ್ನು ರಾಜ್ಯಮಟ್ಟಕ್ಕೆ ಪಸರಿಸುವಂತೆ ಮಾಡಿದ್ದಾಳೆ ಈ ಸಂಸ್ಥೆಯಲ್ಲಿ ಸಿಗುವ ಉತ್ತಮ ಶಿಕ್ಷಣಕ್ಕೆ ಸಾಕ್ಷೀ ಕರಿಸಿದ್ದಾಳೆಂದರು.

ಇನ್ನೋರ್ವ ಪಾಲಕರಾದ ಬಾಪುಗೌಡ ವಂದಲಿ ಅವರು ಮಾತನಾಡಿ ಸಾಧನೆ ಮಾಡಬೇಕೆಂಬ ಛಲಕಟ್ಟಿಕೊಂಡು ವಿದ್ಯಾರ್ಥಿಗಳು ಮುಂದೆ ಸಾಗಬೇಕು ಬ್ರಿಲಿಯಂಟ್ ಶಿಕ್ಷಣ ಸಂಸ್ಥೆಯಲ್ಲಿ ಉತ್ತಮ ಗುರು ಇದ್ದಾರೆ ವಿದ್ಯಾರ್ಥಿಗಳು ಮುಂದೆ ಗುರಿ ಇಟ್ಟುಕೊಂಡು ಬನ್ನಿ ನಿಮ್ಮ ಸಾಧನೆ ಅಚಲವಾಗಲಿದೆ ಎಂದರು.

ಇದೇ ಸಮಯದಲ್ಲಿ ಮರು ಮೌಲ್ಯಮಾಪನದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಗಂಗಾ ಶಿವನಗೌಡ ಕೊಳೂರ ಹಾಗೂ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದ ಅಶ್ವಿನಿರೆಡ್ಡಿ ವಂದಲಿ ಅವರಿಗೆ ಬ್ರಿಲಿಯಂಟ್ ಶಿಕ್ಷಣ ಸಂಸ್ಥೆಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಮಯದಲ್ಲಿ ಶ್ರೀ ಮಾರುತಿ ಶಿಕ್ಷಣ ಸಂಸ್ಥೆ(ಬ್ರಿಲಿಯಂಟ್)ನ ಉಪಾಧ್ಯಕ್ಷ ಆರ್.ಬಿ.ನಡುವಿನಮನಿ, ನಿರ್ದೇಶಕರಾದ ಎಸ್.ಎಚ್.ಪಾಟೀಲ, ಶ್ರೀಮತಿ ಎಲ್.ಎಂ.ಬಿರಾದಾರ, ಶ್ರೀಮತಿ ಎನ್.ಎಸ್.ಗಡಗಿ, ಮುಖ್ಯಗುರುಗಳಾದ ಬಿ.ಜಿ.ಕರಕಳ್ಳಿ, ಡಾ.ವಿನಾಯಕ ಪಟಗಾರ, ಸಂಪನ್ಮೂಲ ವ್ಯಕ್ತಿ ಪ್ರಕಾಶ ಹಟ್ಟಿ, ಮೊದಲಾದವರು ಉಪಸ್ಥಿತರಿದ್ದರು.

"ಬ್ರಿಲಿಯಂಟ್ ಅನ್ನುವದು ಜ್ಞಾನವನ್ನು ಹುಟ್ಟು ಹಾಕುವಂತಹದ್ದಾಗಿದೆ ಅಚಲವಾದ ನಂಬಿಕೆ ಶಿಕ್ಷಕರೊಂದಿಗೆ ನಾವು ನಿತ್ಯ ಚರ್ಚಿಸುವ ವಿಷಯಗಳು ನಮ್ಮಲ್ಲಿಯ ಜ್ಞಾನದ ಹೊತ್ತಿಗೆ ಗಟ್ಟಿಗೊಳಿಸಲಿದೆ ನನ್ನ ಈ ಪ್ರೌಢ ಶಿಕ್ಷಣದಲ್ಲಿ ಯಾವುದೇ ಸಂದರ್ಬದಲ್ಲಿಯೂ ವಿಷಯವಾರು ಚರ್ಚೆಗೆ ಬಂದಾಗ ಎಲ್ಲ ಶಿಕ್ಷಕರು ಸಿಟ್ಟಿಲ್ಲದೇ ಉತ್ತರಿಸಿ ತಿಳಿ ಹೇಳಿದ್ದರಿಂದ ಎಸ್‌ಎಸ್‌ಎಲ್‌ಸಿ ಪರಿಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಯಾರ್ಂಕ್ ಬರಲು ಸಾಧ್ಯವಾಗಿದೆ."

ಕುಮಾರಿ ಗಂಗಾ ಕೊಳೂರ
ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ

# ಯುವ ಪೀಳಿಗೆ ದೇಶದ ಭವಿಷ್ಯವಾಗಿದ್ದು ಶಿಕ್ಷಣದೊಂದಿಗೆ ಸಂಸ್ಕಾರ ಪಡೆದು ಒಳ್ಳೆಯ ನಾಗರಿಕರಾಗಿ: ಶಾಗೋಟಿ




ಗೋಕಾಕ: ಯುವ ಪೀಳಿಗೆ ದೇಶದ ಭವಿಷ್ಯವಾಗಿದ್ದು ಶಿಕ್ಷಣದೊಂದಿಗೆ ಸಂಸ್ಕಾರ ಪಡೆದು ಒಳ್ಳೆಯ ನಾಗರಿಕರಾಗಿರೆಂದು ಇಲ್ಲಿಯ ಜೆಎಸ್‌ಎಸ್ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಯು ಎಮ್ ಶಾಗೋಟಿ ಹೇಳಿದರು.

ಅವರು, ರವಿವಾರದಂದು ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಪದವಿ ಮಹಾವಿದ್ಯಾಲಯದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬಿಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ವಿದ್ಯಾರ್ಥಿಗಳು ಭಾರತೀಯ ಕಲೆ ಸಾಹಿತ್ಯ ಸಂಸ್ಕೃತಿಯ ಆಚರಣೆಯೊಂದಿಗೆ ಅವುಗಳನ್ನು ಬೆಳೆಸಬೇಕು. ದೇಶದ ಅಭಿವೃದ್ಧಿಯಲ್ಲಿ ವಿದ್ಯಾರ್ಥಿಗಳ ಪಾತ್ರ ಮಹ ತ್ವದ್ದಾಗಿದೆ. ಜಗತ್ತಿನಾದ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹೆಚ್ಚಿನ ಉದ್ಯೋಗ ವಕಾಶಗಳಿವೆ. ಕಠೀಣ ಪರಿಶ್ರಮದಿಂದ ಧನಾತ್ಮಕ ಚಿಂತನೆಯೊಂದಿಗೆ ಪ್ರಯತ್ನಶೀ ಲರಾಗಿ ತಮ್ಮ ಬದುಕನ್ನು ರೂಪಿಸಿಕೊ ಳ್ಳುವಂತೆ ಕರೆ ನೀಡಿದರು.

ವೇದಿಕೆಯ ಮೇಲೆ ಪ್ರಾಚಾರ್ಯ ಡಾ.ಐ ಎಸ್ ಪವಾರ, ಉಪನ್ಯಾಸಕರಾದ ಎಸ್ ಎಲ್ ಬಂಯ್ಯಾರ, ಆರ್ ಎ ಜಮಾದಾರ, ಸಿ ಆರ್ ಕಮ್ಮಾರ, ವಿದ್ಯಾರ್ಥಿ ಪ್ರತಿನಿಧಿಗಳಾದ ಭೀಮವ್ವ ಕಾಳಿ, ಶಾರದಾ ಹುಲಿಕಟ್ಟಿ, ಜಯಶ್ರೀ ಹುಣಶ್ಯಾಳ ಇದ್ದರು.

ಉಪನ್ಯಾಸಕರಾದ ಎಸ್ ವೈ ಖಾನಟ್ಟಿ ಸ್ವಾಗತಿಸಿದರು. ಮಲ್ಲಿಕಾರ್ಜುನ ಕಂಗನಾಳ ಮತ್ತು ಐಶ್ವರ್ಯಾ ಕೆ ನಿರೂಪಿಸಿದರು. ಡಾ.ಮನೀಷಾ ಪೂಜಾರಿ ವಂದಿಸಿದರು.

# ಗುರು ಶಿಷ್ಯ ಪರಂಪರೆಯನ್ನು ಜಗತ್ತಿಗೆ ನೀಡಿದ ಕೀರ್ತಿ ನಮ್ಮ ದೇಶದ್ದಾಗಿದೆ: ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ



ಗೋಕಾಕ: ಗುರು ಶಿಷ್ಯ ಪರಂಪರೆಯನ್ನು ಜಗತ್ತಿಗೆ ನೀಡಿದ ಕೀರ್ತಿ ನಮ್ಮ ದೇಶದ್ದಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ ಬಿ ಬಳಗಾರ ಹೇಳಿದರು.

ಅವರು, ರವಿವಾರದಂದು ನಗರದಲ್ಲಿ ಇಲ್ಲಿಯ ಜಿಎಸ್‌ಎಸ್ ಶಾಲೆಯ 2002–03ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಮ್ಮಿಕೊಂಡ ಗುರುಸ್ಮೃತಿ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದರು.

ಶಿಷ್ಯರ ಉಜ್ವಲ ಭವಿಷ್ಯವೇ ಗುರುಗಳ ಗುರಿ ಹಾಗೂ ಆಶಯವಾಗಿದೆ. ಶಿಷ್ಯರು ಸಾಧಕರಾದರೆ ಗುರುಗಳು ಸಂತೋಷ ಪಡುತ್ತಾರೆ. ಇಂದಿನ ಸಾಂಸ್ಕೃತಿಕ ದಿವಾಳಿ ಸಂದರ್ಭದಲ್ಲಿ ಗುರುಗಳನ್ನು ನೆನೆದು ಅವರನ್ನು ಗೌರವಿಸುವಂತಹ ಈ ಕಾರ್ಯ ಮಾದರಿಯಾಗಿದೆ. ನಮ್ಮ ಪರಂಪರೆಯನ್ನು ತಾವು ಮುಂದುವರೆಸುತ್ತಿದ್ದು ತಮ್ಮ ಮಕ್ಕಳಲ್ಲೂ ಇಂತಹ ಸಂಸ್ಕಾರ ಬೆಳೆಸುವಂತೆ ಕರೆ ನೀಡಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಎ ಎ ಸನದಿ, ಎಸ್‌ಸಿ ಕರಿಕಟ್ಟಿ, ಎಮ್‌ಪಿ ಗಾಣಗಿ, ಅಶೋಕ ಬೆಣ್ಣಿ, ಸಿ ಎಸ್ ಮೇಗಲ ಮನಿ, ಎ ಎಮ್ ಮೋಡಿ, ಎಚ್‌ಡಿ ಬೇಗ, ಎಮ್‌ಎ ಬಾಗೇವಾಡಿ, ಎಮ್ ಎಸ್ ವಕ್ಕುಂದ, ಬಿ ಎಸ್ ಸೊಲಬನ್ನವರ, ಎಸ್ ವಿ ಕರಿಕಟ್ಟಿ, ಎಮ್ ಎಮ್ ಹಾದಿ ಮನಿ, ಎಸ್ ಎಸ್ ಮುನ ವಳ್ಳಿ, ಆರ್ ಕೆ ಹಂದಿಗುಂದ, ಎಸ್ ಎಮ್ ಕಲಗುಡಿ, ಡಿ ಸಿ ಜುಗಳಿ, ಎಮ್ ಆರ್ ಹರಿದಾಸ, ಬಿ ಡಿ ಸೊಗಲಿ, ರಾಯಪ್ಪ ಖಾನಪ್ಪನವರ, ಆರ್ ಎಲ್ ಬಬಲಿ, ಎಚ್ ಎಮ್ ಕಾಲೆಬಾಯಿ ಇವರನ್ನು ಸತ್ಕರಿಸಲಾಯಿತು.

# ಅಧ್ಯಯನದ ಅನುಭವದಲ್ಲಿ ಹುಟ್ಟಿದ ಸಾಹಿತ್ಯದೊಳಗಿನ ಕಥೆ ಕಾವ್ಯಗಳು ಮನುಷ್ಯ ಬದುಕಿನ ಹಿತವನ್ನು ಬಯಸುತ್ತವೆ




ಗೋಕಾಕ: ಅಧ್ಯಯನದ ಅನುಭವದಲ್ಲಿ ಹುಟ್ಟಿದ ಸಾಹಿತ್ಯದೊಳಗಿನ ಕಥೆ ಕಾವ್ಯಗಳು ಮನುಷ್ಯ ಬದುಕಿನ ಹಿತವನ್ನು ಬಯಸುತ್ತವೆ. ಎಂದು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಉಪನಿರ್ದೇಶಕ ಬಸವರಾಜ ವ್ಹಿ. ಹಿರೇಮಠ ಹೇಳಿದರು.

ಜಾನಪದ ಕಲೆ, ಸಾಹಿತ್ಯ ಸಾಂಸ್ಕೃತಿಕ ಕೂಟದ ಗೋಕಾವಿ ಗೆಳೆಯರ ಬಳಗ ನಗರದ ಕೆ.ಎಲ್.ಇ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡ ಕಥೀ ಕಥೀ..ಕಾರಣ ವಿನೂತನ ಸಾಹಿತ್ಯ ಚಿಂತನ ಮಂಥನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಇಂದಿನ ಮಕ್ಕಳು ಮತ್ತು ಯುವ ಜನಾಂಗವನ್ನು ಸಾಹಿತ್ಯದ ಕಡೆಗೆ ಸೆಳೆಯಬೇಕಾದ ಅಗತ್ಯವಿದೆ ಎಂದರು.

ಮಡಿಕೇರಿಯ ಜವಾಹರ ನವೋದಯ ವಿದ್ಯಾಲಯದ ಕನ್ನಡ ಉಪನ್ಯಾಸಕ ಹಾಗೂ ಸಾಹಿತಿ ಮಾರುತಿ ದಾಸನ್ನವರ ಕಥೆ ಮತ್ತು ಕಾವ್ಯದ ಕುರಿತು ಉಪನ್ಯಾಸ ನೀಡಿದರು.


ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಪ್ರೊ.ಚಂದ್ರಶೇಖರ ಅಕ್ಕಿ ಆದಿಕವಿ ಪಂಪ, ರನ್ನ ಬರೆದ ಹಳಗನ್ನಡ ಸಾಹಿತ್ಯವನ್ನು ಮರು ಓದು ಮತ್ತು ಚಿಂತನೆ ಮಾಡುವ ಕಾರ್ಯಗಳಾಗಲಿ ಎಂದು ಅಭಿಪ್ರಾಯಿಸಿದರು.

ಕಥೆಗಾರ ಸುರೇಶ ಮುದ್ದಾರ. ಕವಿ ಈಶ್ವರ ಮಮದಾಪೂರ, ರಜನಿ ಜೀರಗ್ಯಾಳ ಚಿಂತನೆ ಮಾತನಾಡಿದರು. ಕಸಾಪ ತಾಲೂಕಾಧ್ಯಕ್ಷ ಭಾರತಿ ಮದಬಾವಿ, ಕೌಜಲಗಿ ಹಿರಿಯ ಸಾಹಿತಿ ಪ್ರಕಾಶ ಕೋಟಿನತೋಟ, ವಾಗ್ಮಿ ರಾಮಚಂದ್ರ ಕಾಕಡೆ, ಬಸವಜ್ಯೋತಿ ಐಟಿಐ ಕಾಲೇಜ ಚೇರಮನ್ ಅಶೋಕ ಲಗಮಪ್ಪಗೋಳ,ಹಿರಿಯ ಸಾಹಿತಿ ಎಸ್ ಆರ್ ನಲವಡೆ, ಕವಿ ಶಿಕ್ಷಕ ಆನಂದ ಮಾಳವದೆ ಉಪಸ್ಥಿತರಿದ್ದರು.

ಸಾಹಿತಿ ಜಯಾನಂದ ಮಾದರ ಪ್ರಾಸ್ತಾವಿಕ ಮಾತನಾಡಿದರು. ವಿಶ್ವದಾಖಲೆ ಕಲಾವಿದ ಜಿ.ಕೆ.ಕಾಡೇಶಕುಮಾರ ಪ್ರಾರ್ಥಿಸಿದರು, ಸಾಹಿತಿ ವಿದ್ಯಾ ರೆಡ್ಡಿ ಸ್ವಾಗತಿಸಿದರು. ಯೋಗ ಶಿಕ್ಷಕ ಆನಂದ ಸೋರಗಾಂವಿ ನಿರೂಪಿಸಿ ವಂದಿಸಿದರು.

# ಕೊಕಟನೂರ ಕಾಲೇಜಿನಲ್ಲಿ ಕಳ್ಳತನ: 24 ಗಂಟೆಯಲ್ಲಿ ಇಬ್ಬರು ಆರೋಪಿಗಳ ಬಂಧನ





ಅಥಣಿ: ಐಗಳಿ ಪೊಲೀಸ್ ಠಾಣೆ ವ್ಯಾಪ್ತಿಯ ಕೊಕಟನೂರ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ಕಳ್ಳತನ ಪ್ರಕರಣವನ್ನು ಪೊಲೀಸರು 24 ಗಂಟೆಯೊಳಗೆ ಭೇದಿಸಿದ್ದಾರೆ ಕಾಲೇಜಿನ ಪ್ರಾಜೆಕ್ಟರ್, ಲೆನೊವಾ ಥಿಂಕ್‌ಪ್ಯಾಡ್, ಲ್ಯಾಪ್‌ಟಾಪ್, ಸೇರಿ ಒಂದು ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಕದ್ದಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿ, ಮಾಲು ವಶಪಡಿಸಿಕೊಳ್ಳಲಾಗಿದೆ.

ದಿನಾಂಕ13/05/2026ರಂದು ರಾತ್ರಿ 12 ಗಂಟೆಗೆ ಕಾಲೇಜಿನ ಗೇಟ್ ಬೀಗ ಮುರಿದು ಒಳನುಗ್ಗಿದ ಕಳ್ಳರು, ಪ್ರಾಜೆಕ್ಟರ್ ಕೊಠಡಿಯ ಬೀಗ ಮುರಿದು ವಸ್ತುಗಳನ್ನು ಕದ್ದಿದ್ದರು ಈ ಬಗ್ಗೆ ಕಾಲೇಜಿನ ಪ್ರಾಚಾರ್ಯ ಸುರೇಶ ನಾಯಕ ಅವರು ಮೇ 16, 2026 ರಂದು ಐಗಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ರಾಮರಾಜನ್ ಐಪಿಎಸ್, ಅಪರ ಪೊಲೀಸ್ ಅಧೀಕ್ಷಕ ಆರ್, ಆರ್, ಬಸರಗಿ, ಅಥಣಿ ಡಿಎಸ್ಪಿ ಪ್ರಶಾಂತ ಮುನ್ನೊಳ್ಳಿ ಹಾಗೂ ಸಿಪಿಐ ಸಂತೋಷ ಹಳ್ಳೂರ ಅವರ ಮಾರ್ಗದರ್ಶನದಲ್ಲಿ ಐಗಳಿ ಪಿಎಸ್‌ಐ ಚಂದ್ರಶೇಖರ ಸಾಗನೂರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು. ಬಂಧಿತರನ್ನು ಕೊಕಟನೂರ ಗ್ರಾಮದ ದರ್ಶನ ರಾಜಕುಮಾರ ಹೊನಕಾಂಬಳೆ, ಮತ್ತು ರಾಕೇಶ ಹೊನಕಾಂಬಳೆ, ಎಂದು ಗುರುತಿಸಲಾಗಿದೆ. ಆರೋಪಿಗಳಿಂದ ಕಳ್ಳತನವಾದ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಐಗಳಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 112/2026 ಕಲಂ 305, 331(4) ಬಿಎನ್‌ಎಸ್ ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಈ ಕಾರ್ಯಾಚರಣೆಯ ಸಂದರ್ಭದಲ್ಲಿ ಸಿಬ್ಬಂದಿಗಳಾದ ಆರೀಫ್ ಪ್ರೊಬೇಷನರಿ ಪಿಎಸ್‌ಐ, ಎಸ್ ಎಚ್ ಬಾಗೋಜಿ, ಪಿ ಎನ್ ಕುರಿ, ಎಸ್ ಎ ಶೇಖ, ಟಿ ಬಿ ಶಾನವಾಡ, ಎಸ್ ನನೆಗೌಡ, ಕೆ ಎಸ್ ವಾ ಘಮೋರೆ, ಎಸ್ ಬಿ ಪೂಜಾರಿ ಪಾಲ್ಗೊಂಡಿದ್ದರು. ತ್ವರಿತ ಕಾರ್ಯಾ ಚರಣೆ ನಡೆಸಿದ ತಂಡವನ್ನು ಮಾನ್ಯ ಎಸ್ಪಿ ಬೆಳಗಾವಿರವರು ಶ್ಲಾಘಿಸಿದ್ದಾರೆ.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001